ವಿಜಯಪುರ | ಸಂಪುಟ 04 | ಸಂಚಿಕೆ 170 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶುಕ್ರವಾರ, ಆಗಸ್ಟ್, 28, 2026



"ನಾನು ಈಗ ಸರ್ಕಾರದ ಮುಖ್ಯಸ್ಥನಲ್ಲ; ನನ್ನ ಕೈಯಲ್ಲಿ ಅಧಿಕಾರವಿಲ್ಲ. ಆದರೆ ನಾನು ಆಂತ-ರಿಕ ಮೀಸಲಾತಿ, ಮೀಸಲಾತಿ ವ್ಯವಸ್ಥೆ ಹಾಗೂ ಸಾಮಾಜಿ-ಕ ನ್ಯಾಯದ ಪರವಾಗಿರುವ ವ್ಯಕ್ತಿ. ಈ ವಿಚಾರದಲ್ಲಿ ಈ ಹಿಂದೆ ಎಂದಿಗೂ ರಾಜಿ ಮಾಡಿಕೊಂಡಿಲ್ಲ, ಮುಂದೆಯೂ ಮಾಡಿಕೊಳ್ಳುವುದಿಲ್ಲ"

■ ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿ



## ದೇವತಾ ಕಾರ್ಯಗಳಿಂದ ಗ್ರಾಮಗಳು ಸುಭಿಕ್ಷ :ಮುರುಗೇಂದ್ರ ಶ್ರೀ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಬೇಡುವವರ ಕಷ್ಟಗಳಿಗೆ ಸದಾ ಆಶೀರ್ವಾದ ಹಾಗೂ ಭಕ್ತಾದಿಗಳ ಇಷ್ಟಾರ್ಥ-ಗಳನ್ನು ಈಡೇರಿಸುವ ದೇವತಾ ಕಾರ್ಯಗಳಿಂದ ಗ್ರಾಮಗಳು ಸುಭಿಕ್ಷವಾಗುವ ಜತೆಗೆ ಮನಸ್ಸಿಗೆ ನೆಮ್ಮದಿ ಸಿಗಲಿದೆ ಎಂದು ಶಿರಶ್ಯಾಡದ ಮುರುಗೇಂದ್ರ ಶಿವಾಚಾರ್ಯರರು ಹೇಳಿದರು.

ನಗರದಲ್ಲಿ ಸಿದ್ದಿ ವಿನಾಯಕ ದೇವಸ್ಥಾನದ 4 ನೇ ವರ್ಷದ ಜಾತ್ರಾ ಮಹೋತ್ಸವ ಅಂಗವಾಗಿ ರುದ್ರಾಭೊಷೇಕ, ಗಣಹೋಮ ಮತ್ತು ಮುತ್ತೈದೆಯ-ರಿಗೆ ಉಡಿ ತುಂಬುವ ಕಾರ್ಯಕ್ರಮ ಧರ್ಮಸಭೆಯ ಸಾನಿದ್ಯ ವಹಿಸಿ ಮಾತನಾಡಿದರು.

ನಾಗಣಸೂರದ ಶ್ರೀಕಂಠ ಶಿವಾಚಾರ್ಯರರು ಮಾತನಾಡಿ ದೇವಾಲಯ ಪ್ರತಿಷ್ಠಾಪನೆ ಆದಾಗಿನಿಂದಲೂ ಜಾತ್ರಾ ಮಹೋತ್ಸವ ಆಚ-ರಿಸುತ್ತಿದ್ದೇವೆ. ಜಾತ್ರಾ ಮಹೋತ್ಸವ ಅಂಗವಾಗಿ ವಿಶೇಷ ಪೂಜೆ ಹವನ ಹೋಮ ಹಾಗೂ ದೀಪಾರಾಧನೆ ವಿವಿಧ ಕಲಾ ತಂಡದಿಂದ ವೀರಗಾಸೆ ಪ್ರದರ್ಶನ ನಡೆಯಿತು. ಅಹಿರಸಂಗದ ಮಲ್ಲಿಕಾರ್ಜುನ ಶಿವಾಚಾರ್ಯರರು, ಅನೀಲಗೌಡ ಬಿರಾದಾರ, ಬಂಗಾರದ ಅಂಗಡಿ ಮಾಲಿಕರ ಸಂಘದ ಅಧ್ಯಕ್ಷ ಸೋಮನಗೌಡ ಬಿರಾದಾರ, ಸುದೀರ ಕರಕಟ್ಟಿ ಮಾತನಾಡಿದರು.

ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ದೇವಸ್ಥಾನ ಸಮಿತಿಯ ಮಹಾಂತೇಶ ಪಾಟೀಲ, ಶ್ರೀಕಾಂತ ಬಡಿಗೇರ, ಸುನೀಲಗೌಡ ಬಿರಾದಾರ ಉಮೇಶ ಪಾಟೀಲ, ರಮೇಶ ಗೋಳಸಾರ ಮತ್ತಿತರಿದ್ದರು.

### ರಾಜ್ಯ ಸರ್ಕಾರದಿಂದ ಅವಳಿ ತಾಲೂಕುಗಳ ರೈತರಿಗೆ ಅನ್ಯಾಯ । ಬಿಜೆಪಿ ಮುಖಂಡ ಶ್ರೀಶೈಲಗೌಡ ಬಿರಾದಾರ ಆಕ್ರೋಶ

## ಸಿಂದಗಿ-ಆಲಮೇಲ ತಾಲೂಕುಗಳನ್ನು ಬರಗಾಲ ಪೀಡಿತವೆಂದು ಘೋಷಿಸಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಸಿಂದಗಿ ಮತ್ತು ಆಲಮೇಲ ತಾಲೂಕುಗಳನ್ನು ಬರಗಾಲ ಪೀಡಿತ ತಾಲೂಕುಗಳೆಂದು ಘೋಷಿಸದೆ ರಾಜ್ಯ ಸರ್ಕಾರ ಅವಳಿ ತಾಲೂಕುಗಳ ರೈತರಿಗೆ ಅನ್ಯಾಯ ಮಾಡುತ್ತಿದೆ ಎಂದು ಬಿಜೆಪಿ ಮುಖಂಡ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ತಾಲೂಕಿನ ಹಲವು ಭಾಗಗಳಲ್ಲಿ ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳಿಗೆ ತೀವ್ರ ಹೊಡೆತ ಬಿದ್ದಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಳೆಗಳಿಗೆ ಅಗತ್ಯ ಪ್ರಮಾಣದ ಮಳೆಯಾಗದೆ ಕೃಷಿ ಉತ್ಪಾದನೆ ಕುಂಠಿತಗೊಂಡಿರುವ ಹಿನ್ನೆಲೆಯಲ್ಲಿ ರೈತರಿಗೆ ಬರ ಪರಿಹಾರ ಸೇರಿದಂತೆ ಸರ್ಕಾರದ ವಿವಿಧ ಸೌಲಭ್ಯಗಳ ಅಗತ್ಯವಿದೆ. ಬರಗಾಲದ ಪರಿಸ್ಥಿತಿ ಇದ್ದರೂ ಸಿಂದಗಿ ಮತ್ತು ಆಲಮೇಲ ತಾಲೂಕುಗಳನ್ನು ಬರಗಾಲ ಪೀಡಿತ ತಾಲೂಕುಗಳ ಪಟ್ಟಿಗೆ ಸೇರಿಸದಿರುವುದು ಸರ್ಕಾರದ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಸರ್ಕಾರದ ಈ ನಡೆಯಿಂದ ಅವಳಿ ತಾಲೂಕಿನ ಸಾವಿರಾರು ರೈತರಿಗೆ ಪರಿಹಾರ ಹಾಗೂ ಅಗತ್ಯ ಸೌಲಭ್ಯಗಳಿಂದ ವಂಚಿತರಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಆರೋಪಿಸಿದ್ದಾರೆ.

ತಕ್ಷಣವೇ ಸಿಂದಗಿ ಹಾಗೂ ಆಲಮೇಲ ತಾಲೂಕುಗಳಲ್ಲಿ ಸಮಗ್ರ ಬೆಳೆ ಸಮೀಕ್ಷೆ ನಡೆಸಿ, ವಾಸ್ತವ ಪರಿಸ್ಥಿತಿಯನ್ನು ಪರಿಶೀಲಿಸಬೇಕು. ರೈತರ ಹಿತದೃಷ್ಟಿಯಿಂದ ಅವಳಿ ತಾಲೂಕುಗಳನ್ನು ಬರಗಾಲ ಪೀಡಿತ ತಾಲೂಕುಗಳೆಂದು ಘೋಷಿಸಿ, ಅರ್ಹ ರೈತರಿಗೆ ಬೆಳೆ ಪರಿಹಾರ ಸೇರಿದಂತೆ ಸರ್ಕಾರದ ಸೌಲಭ್ಯಗಳನ್ನು ಒದಗಿಸಬೇಕು ಎಂದು ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ. ರೈತರ ಸಂಕಷ್ಟವನ್ನು ಸರ್ಕಾರ ರಾಜಕೀಯ ಕಾರಣಗಳಿಂದ ಕಡೆಗಣಿಸಬಾರದು. ವಾಸ್ತವ ಪರಿಸ್ಥಿತಿಯನ್ನು ಆಧರಿಸಿ ತಕ್ಷಣ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

### ಬಿಜೆಪಿ ಎಸ್.ಸಿ. ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ ಆರೋಪ

## ಅವೈಜ್ಞಾನಿಕ ಆರ್ಥಿಕ ನೀತಿಯಿಂದ ಸರ್ಕಾರದ ಖಜಾನೆ ಖಾಲಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯ 13 ತಾಲೂಕುಗಳಲ್ಲಿಯೂ ಬರ ತಾಂಡವವಾಡುತ್ತಿದೆ, ಆದರೆ ಸರ್ಕಾರ ಮಾತ್ರ ಕೇವಲ ಮೂರು ತಾಲೂಕುಗಳು ಬರ ಪೀಡಿತ ಎಂದು ಘೋಷಣೆ ಮಾಡಿದೆ, ಉಳಿದ ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿ ಅಲ್ಲಿ ಪರಿಹಾರೋಪಾಯಗಳನ್ನು ಕೈಗೊಳ್ಳಲು ಸರ್ಕಾರದ ಬಳಿ ದುಡ್ಡಿಲ್ಲವೇ? ಸರ್ಕಾರದ ಖಜಾನೆ ಖಾಲಿಯಾಗಿರುವುದು ಖಾತ್ರಿಯಾಗಿದೆ ಎಂದು ಬಿಜೆಪಿ ಎಸ್.ಸಿ. ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ ಅಸಮಾಧಾನ ಹೊರಹಾಕಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿಜಯಪುರ, ನಿಡಗುಂದಿ ಹಾಗೂ ಕೊಲ್ಹಾರ ತಾಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಲಾಗಿದೆ, ಇಂಡಿ, ಚಡಚಣ, ತಾಳಿಕೋಟೆ ಹೀಗೆ ಎಲ್ಲ ತಾಲೂಕುಗಳಲ್ಲಿ ಬರ ಪರಿಸ್ಥಿತಿ ಇದೆ, ಬೆಳೆದ ಬೆಳೆ ಕೈಗೆ ಬಾರದೇ ರೈತ ಚಿಂತಾಜನಕ ಸ್ಥಿತಿಯಲ್ಲಿದ್ದಾನೆ, ಮೊನ್ನೆ ಉಪಮುಖ್ಯಮಂತ್ರಿಗಳಾದ ಡಾ.ಜಿ. ಪರಮೇಶ್ವರ ಅವರು ಬರ ಪರಿಹಾರ ಕಾಮಗಾರಿ ಕೈಗೊಳ್ಳಲು ಸರ್ಕಾರದ ಬಳಿ ದುಡ್ಡಿನ ಕೊರತೆ ಇಲ್ಲ ಎಂದು ವಿಧಾನಸೌಧದಲ್ಲಿ ಹೇಳಿದ್ದರು. ಆದರೆ ಈಗ ಕೆಲವೇ ಗ್ರಾಮಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಿದ್ದಾರೆ.

ರಾಜಸ್ತಾನದ ಜೈಸಲ್ಮೇರ್ ನಂತರ ಅತೀ ಬರ ಪೀಡಿತ ಎಂಬ ಪ್ರದೇಶವಾಗಿರುವ ವಿಜಯಪುರ ಜಿಲ್ಲೆಯ ಕೇವಲ 3 ತಾಲೂಕುಗಳನ್ನು ಬರ ಪೀಡಿತ ತಾಲೂಕು ಎಂದು ಘೋಷಿಸಿ, ಉಳಿದ ತಾಲೂಕುಗಳ ರೈತರಿಗೆ ಘೋರ ಅನ್ಯಾಯ ಮಾಡಲಾಗಿದೆ, ರೈತರ ಸಹಾಯಕ್ಕೂ ಬಾರದಿದ್ದರೆ ಸರ್ಕಾರ ಇದ್ದಾದರೂ ಏನೂ ಪ್ರಯೋಜನ? ಅವೈಜ್ಞಾನಿಕ ಆರ್ಥಿಕ ನೀತಿಯಿಂದ ಸರ್ಕಾರದ ಖಜಾನೆ ಖಾಲಿಯಾಗಿದೆ, ಬರ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಸಹ ಸರ್ಕಾರದ ಬಳಿ ದುಡ್ಡಿಲ್ಲ ಎಂಬುದು ಖಾತ್ರಿಯಾದಂತಾಗಿದೆ ಎಂದು ಕಾರಜೋಳ ಹೇಳಿದ್ದಾರೆ.

ರಾಜ್ಯ ಸರ್ಕಾರ ರೈತರ ವಿಷಯದಲ್ಲಿ ಚೆಲ್ಲಾಟವಾಡಬಾರದು, ವಿಜಯಪುರ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ತಾಲೂಕು ಎಂದು ಘೋಷಣೆ ಮಾಡಬೇಕು, ರಾಜ್ಯದ ವಿವಿಧ ಭಾಗದ ಉಳಿದ ಅಗತ್ಯ ತಾಲೂಕುಗಳನ್ನು ಸಹ ಬರಪೀಡಿತ ಎಂದು ಘೋಷಿಸಿ ಸಮಸ್ತ ರೈತ ವಲಯದ ಹಿತ ಕಾಪಾಡಬೇಕು, ಈ ವಿಷಯದಲ್ಲಿ ಸರ್ಕಾರ ಮಾನವೀಯತೆಯಿಂದ ನಡೆದುಕೊಳ್ಳಬೇಕು ಎಂದು ಕಾರಜೋಳ ಹೇಳಿದ್ದಾರೆ.

## ಮಹಾತ್ಮ ಗಾಂಧೀಜಿ ಜಯಂತಿ ಅಂಗವಾಗಿ ಬಾಪೂಜಿ ಪ್ರಬಂಧ ಸ್ಪರ್ಧೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಆಚರಿಸುತ್ತಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 157ನೇ ಜಯಂತಿ ಅಂಗವಾಗಿ ವಿದ್ಯಾರ್ಥಿ ಹಾಗೂ ಯುವಜನರಲ್ಲಿ ಮಹಾತ್ಮ ಗಾಂಧೀಜಿಯವರ ಬದುಕು. ಸ್ವಾತಂತ್ರ್ಯ ಚಳುವಳಿ. ಸರಳತೆ, ಅಹಿಂಸಾ ಮಾರ್ಗ, ಸಹಬಾಳ್ವೆ, ಅಸ್ಪೃಶ್ಯತೆ ನಿವಾರಣೆಗಾಗಿ ನಡೆಸಿದ ಪ್ರಯೋಗಗಳು ಇತ್ಯಾದಿ ವಿಚಾರಗಳ ಬಗ್ಗೆ ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ-ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

ವಿವಿಧ ವಿಷಯಗಳ ಕುರಿತು ಪ್ರೌಢಶಾಲೆ, ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ-ಸ್ನಾತಕೋತ್ತರ ಪದವಿಗಳ ಹಂತದ ವಿದ್ಯಾರ್ಥಿಗಳಿಗೆ ಒಟ್ಟು 3 ವಿಭಾಗಗಳಲ್ಲಿ ಬಾಪೂಜಿ ಪ್ರಬಂಧ ಸ್ಪರ್ಧೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಆಯೋಜಿಸಲಾಗುತ್ತಿದೆ.

ವಿಜೇತರಿಗೆ ರಾಜ್ಯಮಟ್ಟದಲ್ಲಿ ಪ್ರಥಮ ಬಹುಮಾನ 31 ಸಾವಿರ ರೂ. ದ್ವಿತೀಯ ಬಹುಮಾನ 21 ಸಾವಿರ ರೂ. ಮತ್ತು ತೃತೀಯ ಬಹುಮಾನ 11 ಸಾವಿರ ರೂ. ಹಾಗೂ ಜಿಲ್ಲಾಮಟ್ಟದಲ್ಲಿ ಪ್ರಥಮ ಬಹುಮಾನ 3 ಸಾವಿರ ರೂ. ದ್ವಿತೀಯ ಬಹುಮಾನ 2 ಸಾವಿರ ರೂ. ಮತ್ತು ತೃತೀಯ ಬಹುಮಾನ 1 ಸಾವಿರ ರೂ. ಬಹುಮಾನ ನೀಡಲಾಗುವುದು.

ಪ್ರೌಢ ಶಾಲಾ ವಿಭಾಗದಲ್ಲಿ : 1) ಗಾಂಧೀಜಿ ಕಲಿಸಿದ ಸರಳ ಜೀವನ-ಮಹಾನ್ ಸಂದೇಶ. 2) ನಾನು ಗಾಂಧೀ-ಜಿಯಂತೆ ಸತ್ಯ ಹೇಳುವೆನು.

3) ಗಾಂಧೀಜಿಯ ಜೀವನ ಕಥೆಯಿಂದ ಕಲಿಯುವ ಐದು ಪಾಠಗಳು. ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ಈ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು



ವಿಷಯ ಕುರಿತು 700 ರಿಂದ 800 ಪದಗಳು ಮೀರದಂತೆ ಪ್ರಬಂಧ ಬರೆಯಬೇಕು.

ಪದವಿ ಪೂರ್ವ ಶಿಕ್ಷಣ ವಿಭಾಗದಲ್ಲಿ : 1) ಗಾಂಧೀ-ಜಿಯ ದೃಷ್ಟಿಯಲ್ಲಿ ನಿಜವಾದ ಸ್ವಾತಂತ್ರ

2) ಸತ್ಯ ಮತ್ತು ಅಹಿಂಸೆ-ನನ್ನ ಜೀವನ ದಾರಿ. 3) ಅಸಮಾನತೆ ನಿವಾರಣೆಗೆ ಗಾಂಧೀಜಿಯವರ ಕೊಡುಗೆ. ಪದವಿ ಪೂರ್ವ ಶಿಕ್ಷಣ ವಿಭಾಗದ ವಿದ್ಯಾರ್ಥಿಗಳು ಈ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು 900 ರಿಂದ 1000 ಪದಗಳು ಮೀರದಂತೆ ಪ್ರಬಂಧ ಬರೆಯಬೇಕು.

ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದಲ್ಲಿ: 1) ನೈತಿಕ ರಾಜಕಾರಣ-ಗಾಂಧೀಜಿಯ ತತ್ವಗಳ ಇಂದಿನ ಪ್ರಾಸಂಗಿಕತೆ. 2) ಸತ್ಯಾಗ್ರಹ-ಇಂದಿನ ಕಾಲದ ಅವಶ್ಯಕತೆ 3) ಗಾಂಧೀಜಿಯ ಶಿಕ್ಷಣ ತತ್ವ-ನೈತಿಕ,ಕೌಶಲ್ಯ ಹಾಗೂ ಸೇವಾಭಾವ.

ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದ ವಿದ್ಯಾರ್ಥಿಗಳು ಈ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯ ಕುರಿತು 1400 ರಿಂದ 1500 ಪದಗಳು ಮೀರದಂತೆ ಪ್ರಬಂಧ ಬರೆಯಬೇಕು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಿಲ್ಲಾ ಕಚೇರಿಯು ಜಿಲ್ಲಾಡಳಿತದ ಸಹಯೋಗದೊಂದಿಗೆ ಸ್ಪರ್ಧೆ ಏರ್ಪಡಿಸಿ ನಂತರ ಮೌಲ್ಯಮಾಪನ ಮಾಡಿ ದಿನಾಂಕ : 08-09-2026ರೊಳಗಾಗಿ ವಿಜೇತರ ವಿವರಗಳು ಹಾಗೂ ಪ್ರಬಂಧಗಳನ್ನು ಕೇಂದ್ರ ಕಚೇರಿಗೆ ಕಳುಹಿಸಲಾಗುವುದು.

ಜಿಲ್ಲಾಮಟ್ಟದ ಪ್ರಥಮ ಬಹುಮಾನ ವಿಜೇತ ಪ್ರಬಂಧಗಳನ್ನು ರಾಜ್ಯಮಟ್ಟದಲ್ಲಿ ಮರುಮೌಲ್ಯಮಾಪನ ಮಾಡಿ, ರಾಜ್ಯಮಟ್ಟದ ಫಲಿತಾಂಶ ಘೋಷಿಸಲಾಗುವುದು.

ಪ್ರತಿ ವಿಭಾಗದಲ್ಲಿನ ಅತ್ಯುತ್ತಮವಾದ ಮೂರು (3) ಪ್ರಬಂಧಗಳಿಗೆ ಅಕ್ಟೋಬರ್ 02 ರಂದು ಜಿಲ್ಲಾ ಮಟ್ಟದ ಗಾಂಧೀ ಜಯಂತಿ ದಿನಾಚರಣೆ ಸಂದರ್ಭದಲ್ಲಿ ಬಹುಮಾನ ನೀಡಿ ಪ್ರಬಂಧ ರಚನೆಕಾರರನ್ನು ಗೌರವಿಸಲಾಗುವುದು.

ನಿಬಂಧನೆಗಳು : ಪ್ರಬಂಧವು ಸಂಪೂರ್ಣವಾಗಿ ಸ್ವರಚಿತವಾಗಿರಬೇಕು. ಸ್ಪರ್ಧೆ ಏರ್ಪಡಿಸುವ ಸ್ಥಳದಲ್ಲಿಯೇ ಶುದ್ಧ ಕೈಬರಹದಲ್ಲಿ ಪ್ರಬಂಧ ಬರೆಯಬೇಕು. ಅಕರವಾಗಿ ಬಳಸಿದ ಪರಾಮರ್ಶನ / ಅಧಾರ ಗ್ರಂಥಗಳ ವಿವರಗಳನ್ನು ಪ್ರಬಂಧದ ಕೊನೆಯಲ್ಲಿ ನಮೂದಿಸಬೇಕು. ಆದ-ರೆ, ಸ್ಪರ್ಧೆ ಏರ್ಪಡಿಸುವ ಸ್ಥಳದಲ್ಲಿ ಪರಾಮರ್ಶನ / ಆಧಾರ ಗ್ರಂಥಗಳು / ಮೊಬೈಲ್ ಗಳ ಬಳಕೆಗೆ ಅವಕಾಶವಿರುವುದಿಲ್ಲ. ಪ್ರಬಂಧಕಾರರ ಹೆಸರು, ವಿಳಾಸ ನಮೂದಿಸಿರಬೇಕು. ಪ್ರಬಂಧವು ಈ ಮೊದಲು ಎಲ್ಲಿಯೂ ಪ್ರಕಟವಾಗಿರಬಾರದು. ಆಯ್ದ ಪ್ರಬಂಧಗಳ ಪ್ರಕಟಣೆಯ ಹಕ್ಕನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾಯ್ದಿರಿಸಿಕೊಂಡಿರುತ್ತದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಮೊ: 9049499783 ಗೆ ಸಂಪರ್ಕಿಸಬಹುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪತ್ರಕರ್ತನಿಗೆ ಜೀವ ಬೆದರಿಕೆ: ಕಠಿಣ ಕ್ರಮಕ್ಕೆ ಗೃಹ ಸಚಿವರಿಗೆ ಮನವಿ

■ ಉದಯರಶ್ಮಿ ದಿನಪತ್ರಿಕೆ




ಸಿಂದಗಿ: ಅಕ್ಕಿ ಮಾಫಿಯಾ ಕುರಿತು ವರದಿ ಮಾಡಿದ್ದ ವಿಜಯಪುರ ಜಿಲ್ಲಾ ವರದಿಗಾರ ಪರಶುರಾಮ ಶಿವಶರಣ ಅವರ ಮನೆಗೆ ತೆರಳಿ ಜೀವ ಬೆದರಿಕೆ ಹಾಕಿರುವ ಘಟನೆ ಖಂಡಿಸಿ ಸಿಂದಗಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘವು ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಪತ್ರಕರ್ತರ ಸುರಕ್ಷತೆ ಹಾಗೂ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ತಹಶೀಲ್ದಾರ್ ಅವರ ಮೂಲಕ ಗೃಹ ಸಚಿವರಿಗೆ ಮನವಿ ಸಲ್ಲಿಸಿ ಕಾನಿಪ ಸಂಘದ ತಾಲೂಕಾಧ್ಯಕ್ಷ ಮಹಾಂತೇಶ ನೂಲಾನವರ ಮಾತನಾಡಿ, ಅಕ್ರಮ ಹಾಗೂ ಭ್ರಷ್ಟಾಚಾರದ ಕುರಿತು ವರದಿ ಮಾಡುವುದು ಪತ್ರಕರ್ತರ ವೃತ್ತಿಪರ ಕರ್ತವ್ಯವಾಗಿದೆ. ಆದರೆ, ಪತ್ರಕರ್ತರಿಗೆ ಜೀವ ಬೆದ-ರಿಕೆ ಹಾಕುವುದು, ಅವರ ಮೇಲೆ ಹಲ್ಲೆ ನಡೆಸುವುದು ಖಂಡನೀಯ. ಇಂತಹ ಘಟನೆಗಳು ಪತ್ರಿಕಾ ಸ್ವಾತಂತ್ರ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ. ಈಗಾಗಲೇ ಬಂಧಿಸಲಾಗಿರುವ ಇಬ್ಬರು ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಪೊಲೀಸ್ ಇಲಾಖೆ ಅಗತ್ಯಕ್ರಮ ಕೈಗೊಳ್ಳಬೇಕು. ಪತ್ರಕರ್ತರು ಯಾವುದೇ ಭಯ, ಬೆದರಿಕೆ ಹಾಗೂ ಒತ್ತಡವಿಲ್ಲದೆ ತಮ್ಮ ವೃತ್ತಿಪರ ಕರ್ತವ್ಯ ನಿರ್ವಹಿಸುವಂತಹ ವಾತಾವರಣ ನಿರ್ಮಾಣವಾಗಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕಾನಿಪ ಸಂಘದ ಉಪಾಧ್ಯಕ್ಷ ಅಂಬರೀಶ ಸುಣಗಾರ, ಹಿರಿಯ ಪತ್ರಕರ್ತರಾದ ರವಿಚಂದ್ರ ಮಲ್ಲೇದ, ಸುದರ್ಶನ ಜಂಗಣ್ಣಿ, ಗುರುರಾಜ ಮಠ, ನಾಗೇಶ ತಳವಾರ, ಜಾಹಿರ್ ಮುಲ್ಲಾ, ಖಾಜಾಅಮೀನ್ ಮಕಾಂದಾರ ಸೇರಿದಂತೆ ಇತರರು ಇದ್ದರು.

### ಹಿರಿಯ ಪತ್ರಕರ್ತ ಪರಶುರಾಮ ಶಿವಶರಣ ಅವರಿಗೆ ಧಮ್ಕಿ ಹಾಕಿರುವ ಅಕ್ಕಿ ಕಳ್ಳರ ಮೇಲೆ ಕಠಿಣ ಕಾನೂನು ಕ್ರಮಕ್ಕೆ ಆಗ್ರಹಿಸಿ ಕಾರ್ಯನಿರತ ಪತ್ರಕರ್ತರ ಸಂಘ ಮನವಿ

## ಪತ್ರಕರ್ತರ ರಕ್ಷಣೆಗೆ ಸೂಕ್ತ ಕಾನೂನು ಜಾರಿಯಾಗಲಿ :ಇಂದುಶೇಖರ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಹಿರಿಯ ಪತ್ರಕರ್ತ ಪರಶುರಾಮ ಶಿವಶರಣ ಅವರ ಮನೆಗೆ ತೆರಳಿ ಧಮ್ಕಿ ಹಾಕಿರುವ ಅಕ್ಕಿ ಕಳ್ಳರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ವಿಜಯಪುರ ಜಿಲ್ಲಾಧಿಕಾರಿ ಡಾ.ಆನಂದ ಕೆ ಅವರಿಗೆ ಕಾನಿಪ ಜಿಲ್ಲಾ ಘಟಕ, ಆಮ್ ಆದ್ಮಿ ಪಕ್ಷ ಹಾಗೂ ಅಖಂಡ ಕರ್ನಾಟಕ ರೈತ ಸಂಘದ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ಈ ವೇಳೆ ಕಾನಿಪ ಸಂಘದ ಜಿಲ್ಲಾಧ್ಯಕ್ಷ ಅಶೋಕ ಯಡಹಳ್ಳಿ ಮಾತನಾಡಿ, ಪತ್ರಕರ್ತರನ್ನು ಪ್ರಜಾಪ್ರಭುತ್ವದ ನಾಲ್ಕನೆ ಅಂಗ ಎಂದು ಕರೆಯಲಾಗುತ್ತಿದೆ ಆದ-ರೆ ವಿಜಯಪುರದಲ್ಲಿ ಆ ಅಂಗವನ್ನು ಕುಸಿಯುವಂತಹ ವಾತಾವರಣ ನಿರ್ಮಾಣವಾಗಿದೆ. ಪತ್ರಕರ್ತರು ನಿರ್ಭೀತಿಯಿಂದ ಕಾರ್ಯ ನಿರ್ವಹಿಸಲು ಸಾಧ್ಯವಾಗದಂತಹ ಪರಿಸ್ಥಿತಿ ಸೃಷ್ಠಿಯಾಗಿದೆ. ಹಿರಿಯ ಪತ್ರಕರ್ತ ಪರಶುರಾಮ ಶಿವಶರಣ ಅವರು ಅಕ್ಕಿ ಕಳ್ಳತನದ ಕು-ರಿತು ಬರೆದ ವರದಿ ತಪ್ಪಾಗಿದ್ದರೆ ಪ್ರಕರಣ ದಾಖಲಿಸಲಿ ನಾವು ಅದನ್ನು ಸ್ವೀಕರಿಸಿ ಕಾನೂನು ಹೋರಾಟ ಮಾಡುತ್ತೇವೆ. ಆದರೆ ಪತ್ರಕರ್ತರ ಮನೆಗೆ ತೆರಳಿ ದಮ್ಕಿ ಹಾಕುವುದು, ಕುಟುಂಬದವರಲ್ಲಿ ಆತಂಕ ಉಂಟಾಗುವ ರೀತಿಯಲ್ಲಿ ವರ್ತನೆ ತೋರುವುದು, ಅಲ್ಲದೇ ಪತ್ರಕರ್ತರಲ್ಲಿ ಭಯದ ವಾತಾವರಣ ಸೃಷ್ಠಿಸುತ್ತಿರುವದು ಅತ್ಯಂತ ಖಂಡನೀಯ ಎಂದರು.

ಜಿಲ್ಲಾಡಾಳಿತ, ಜಿಲ್ಲಾ ಪೊಲೀಸ್ ಅಧಿಕಾರಿಗಳು ಪತ್ರಕರ್ತ ಪರಶುರಾಮ ಶಿವಶರಣ ಅವರ ಮನೆಗೆ ಹೋಗಿರುವ ಆರೋಪಿಗಳ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಒಂದು ವೇಳೆ ಅವರ ಮೇಲೆ ಸೂಕ್ತ ಕ್ರಮ ಆಗದಿದ್ದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕಾನಿಪ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಂದುಶೇಖರ ಮಣೂರ ಮಾತನಾಡಿ, ಪತ್ರಕರ್ತ ಪರಶುರಾಮ ಶಿವಶರಣ ಅವರ ಮೇಲೆ ಹಲ್ಲೆಗೆ ಯತ್ನಿಸುವ ಭಾಗವಾಗಿ ಅವರ ಮನೆಗೆ ತೆರಳಿ ಭಯಪಡಿಸಲು ಪ್ರಯತ್ನ ಮಾಡಿರುವವರನ್ನು ಸುಮ್ಮನೆ ಬಿಡಬಾರದು. ನಾವು ಸಮಾಜದ ಧ್ವನಿಯಾಗಿ, ಜನಧ್ವನಿಯಾಗಿ ಕೆಲಸ ಮಾಡುವ ಪತ್ರಕರ್ತರು. ಸಮಾಜದಲ್ಲಿ ನಡೆಯುವ ಅನ್ಯಾಯ, ಅಕ್ರಮ ಚಟುವಟಿಕೆಗಳ ಕುರಿತು ಸರ್ಕಾರಕ್ಕೆ ಮಾಹಿತಿ ನೀಡುವ ನಮ್ಮ ಧ್ವನಿಯನ್ನು ಹತ್ತಿಕ್ಕಲು ದುಷ್ಟಶಕ್ತಿಗಳ ಪ್ರಯತ್ನ ಆಗಾಗ ನಡೆಯುತ್ತಲೇ ಇರುವುದು ಖಂಡನೀಯ. ಸರ್ಕಾರ ಪತ್ರಕರ್ತರ ರಕ್ಷಣೆಗೆ ಸೂಕ್ತ ಕಾನೂನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಅಖಂಡ ಕರ್ನಾಟಕ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಸಮಾಜದ ಅಂಕುಡೊಂಕುಗಳನ್ನು ತಿದ್ದುವ, ಸ್ವಾಸ್ಥ್ಯ ಸಮಾಜ ನಿರ್ಮಾಣ ಹಾಗೂ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವ ಪತ್ರಕರ್ತರ ಮೇಲೆ ದಬ್ಬಾಳಿಕೆ ನಡೆಸುತ್ತಿರುವ ಅಕ್ಕಿ ಕಳ್ಳರ ಮೇಲೆ ಜಿಲ್ಲಾಡಳಿತ ಹಾಗೂ ಸರ್ಕಾರ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಪತ್ರಕರ್ತ ಪರಶುರಾಮ ಶಿವಶರಣ ಅವರ ಮನೆಗೆ ತೆರಳಿ ಅವಾಚ್ಯ ಶಬ್ದಗಳನ್ನು ಬಳಸಿ ಕುಟುಂಬಕ್ಕೆ ಬೆದರಿಕೆ ಹಾಕಿರುವ ಅಕ್ಕಿ ಕಳ್ಳರನ್ನು ಹಾಗೂ ಅವರಿಗೆ ಬೆಂಬಲವಾಗಿ ನಿಂತಿರುವ ಕಾಣದ ಕೈಗಳನ್ನು ಕೂಡಲೇ ಬಂಧಿಸಿ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ರಾಷ್ಟ್ರೀಯ ಕಾರ್ಯಕಾರಣಿ ಮಂಡಳಿ ಸದಸ್ಯ ಶರಣು ಮಸಳಿ ಮಾತನಾಡಿ, ರಾಜ್ಯಾದ್ಯಂತ ಪತ್ರಕರ್ತರ ಮೇಲೆ ಹಲ್ಲೆಗಳು ನಡೆಯುತ್ತಲೇ ಇವೆ. ಪತ್ರಕರ್ತರು ನಾಲ್ಕನೇ ಅಂಗ ಆದರೆ ಅವರ ರಕ್ಷಣೆಗೆ ಯಾರೂ ಇಲ್ಲದಂತಾಗಿದೆ. ಜೀವ ಪಣಕ್ಕಿಟ್ಟು ಸುದ್ದಿ ಮಾಡುವ ಪತ್ರಕರ್ತರಿಗೆ ಸರ್ಕಾರ ಸೂಕ್ತ ರಕ್ಷಣೆ ನೀಡಬೇಕು. ಶಿವಶರಣ ಅವರ ಮನೆಗೆ ಹೋಗಿ ಭಯ ಹುಟ್ಟಿಸಲು ಪ್ರಯತ್ನಿಸಿರುವ ವ್ಯಕ್ತಿಗಳಿಗೆ ಕಠಿಣ ಶಿಕ್ಷೆಗೊಳಪಡಿಸಬೇಕು ಎಂದರು.

ಹಿರಿಯ ವರದಿಗಾರ ಬಸವರಾಜ ಸಂಪಳ್ಳಿ ಮಾತನಾಡಿ, ಅಕ್ಕಿ ಮಾಫಿಯಾಗಳು ಜೀವ ಬೆದರಿಕೆ ಹಾಕಿ ಹಲ್ಲೆ ನಡೆಸುವ ಯತ್ನ ಮಾಡಿದ್ದಾರೆ. ಅಲ್ಲದೇ ಜಾತಿ ನಿಂದನೆಯನ್ನು ಸಹಿತ ಮಾಡಿರುವುದನ್ನು ಜಿಲ್ಲಾಡಳಿತ ಹಗುರವಾಗಿ ಪರಿಗಣಿಸದೆ ಸೂಕ್ತ ಕ್ರಮ ಜರುಗಿಸಬೇಕು. ಅಕ್ಕಿ ಮಾಫಿಯಾಗಳಿಗೆ ಅಧಿಕಾರಿಗಳೂ ಸಹಿತ ಸಾತ್ ನೀಡುತ್ತಿರುವ ಮಾಹಿತಿಯೂ ಇದೆ. ಜಿಲ್ಲಾಡಳಿತ ಅಕ್ಕಿ ಕಳ್ಳರನ್ನು ಈಗಾಗಲೇ ಬಂಧಿಸಿದೆ. ಎಲ್ಲ ಅಕ್ಕಿ ಕಳ್ಳರಿಗೂ ಜಿಲ್ಲಾಡಳಿತ ಒಂದು ಸಂದೇಶ ರವಾನೆ ಮಾಡಬೇಕು. ಸಂಬಂಧಿಸಿದ ಇಲಾಖೆ ಅಧಿಕಾರಿಗಳನ್ನು ಸಹಿತ ತನಿಖೆಗೆ ಒಳಪಡಿಸಬೇಕು ಎಂದು ಮನವಿ ಮಾಡಿದರು.

ಎಎಪಿ ಜಿಲ್ಲಾಧ್ಯಕ್ಷ ಭೋಗೇಶ ಸೊಲಾಪೂರ ಹಾಗೂ ಪತ್ರಕರ್ತ ಪರಶುರಾಮ ಶಿವಶರಣ ಮಾತನಾಡಿದರು.

ಈ ಸಂದರ್ಭದಲ್ಲಿ ಕಾನಿಪ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮೋಹನ ಕುಲಕರ್ಣಿ, ಜಿಲ್ಲಾ ಉಪಾಧ್ಯಕ್ಷ ಸಮೀರ ಇನಾಮದಾರ, ಜಿಲ್ಲಾ ಕಾರ್ಯದರ್ಶಿಗಳಾದ ಅವಿನಾಶ ಬಿದರಿ, ವಿನೋದ ಸಾರವಾಡ, ಪತ್ರಕರ್ತರಾದ ಗೋಪಾಲ ಕನಿಮನಿ, ಶಿವಾನಂದ ಶಿವಶರಣ, ಗುರುರಾಜ ಗದ್ದನಕೇರಿ, ಷಡಕ್ಷರಿ ಕಂಪಣ್ಣನವರ, ಬಾಬು ತಡಲಗಿ, ಸುನೀಲ ಭಾಸ್ಕರ್, ಮೋಹನ ಕುಲಕರ್ಣಿ, ಮಂಜು ಕಲಾಲ್, ಶರಣು ಮರನೂರ, ಕಲ್ಲು ಶಿವಶರಣ, ಸಂಜೀವ ಕುಲಕರ್ಣಿ, ವೆಂಕಟೇಶ ಭೈರಾಮಡಗಿ, ಫಯಾಜ ಕಲಾದಗಿ, ರಾಜೇಂದ್ರಸಿಂಗ್ ಹಜೇರಿ, ಚಂದ್ರಕಾಂತ ಮಾವುರ, ಸಂತೋಷ, ಸುರೇಶ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

# ರಾಖಿಯ ದಾರದಲ್ಲಿ ಬೆಸೆದ ಅನಂತ ಬಂಧ



## ಅಣ್ಣತಂಗಿಯರ ಬಾಂಧವ್ಯದ ಭಾವಲೋಕ, ಪರಂಪರೆ ಮತ್ತು ಇಂದಿನ ವಾಸ್ತವಿಕತೆ

■ ಉದಯರಶ್ಮಿ ದಿನಪತ್ರಿಕೆ

ಕೆಲವು ಸಂಬಂಧಗಳು ಮಾತುಗಳಿಂದ ಅರ್ಥವಾಗುವುದಿಲ್ಲ; ಅವುಗಳನ್ನು ಅನುಭವಿಸಬೇಕು. ಕೆಲವು ಬಂಧಗಳಿಗೆ ಸಾಕ್ಷಿ ಬೇಕಾಗುವುದಿಲ್ಲ; ಅವುಗಳ ಅಸ್ತಿತ್ವವೇ ಒಂದು ಭರವಸೆ. ಅಂತಹ ಅಪೂರ್ವ ಬಂಧಗಳಲ್ಲಿ ಅಣ್ಣ ತಂಗಿಯರ ಸಂಬಂಧವೂ ಒಂದು. ಬಾಲ್ಯದ ನಗು, ತುಂಟಾಟ, ಸಣ್ಣಪುಟ್ಟ ಮುನಿಸು, ಜಗಳ, ಹಂಚಿಕೊಂಡ ಸಂತೋಷ, ಕಣ್ಣೀರಿನ ಕ್ಷಣಗಳು, ಪರಸ್ಪರರ ಕಾಳಜಿ ಇವೆಲ್ಲವನ್ನೂ ತನ್ನೊಳಗೆ ಹೊತ್ತುಕೊಂಡು ಬದುಕಿನ ವಿವಿಧ ಹಂತಗಳಲ್ಲಿ ಸಾಗುವ ಈ ಸಂಬಂಧಕ್ಕೆ ರಕ್ಷಾ ಬಂಧನ ಒಂದು ಸುಂದರವಾದ ಭಾವನಾತ್ಮಕ ಅಭಿವ್ಯಕ್ತಿ.

ರಕ್ಷಾ ಬಂಧನ ಎಂದರೆ ಕೇವಲ ಮಣಿಕಟ್ಟಿಗೆ ಕಟ್ಟುವ ರಾಖಿಯಲ್ಲ. ಅದು ಒಂದು ಸಂಬಂಧದ ನೆನಪು. ಒಂದು ನಂಬಿಕೆಯ ಸಂಕೇತ. ಒಂದು ಭರವಸೆಯ ಬಂಧ. ತಂಗಿ ಅಣ್ಣನ ಕೈಗೆ ರಾಖಿ ಕಟ್ಟುವ ಕ್ಷಣದಲ್ಲಿ ಅವಳ ಕೈಯಲ್ಲಿ ಇರುವ ದಾರಕ್ಕಿಂತ ಅವಳ ಹೃದಯದಲ್ಲಿರುವ ಭಾವನೆಯೇ ಮುಖ್ಯವಾಗುತ್ತದೆ. ಆ ದಾರದಲ್ಲಿ ಪ್ರೀತಿ ಇದೆ, ಕಾಳಜಿ ಇದೆ, ನಂಬಿಕೆ ಇದೆ, ಅಣ್ಣನ ಒಳಿತಿಗಾಗಿ ಹಾರೈಸುವ ಮನಸ್ಸಿದೆ. ಅದೇ ರೀತಿ ಅಣ್ಣನ ಮಣಿಕಟ್ಟಿಗೆ ರಾಖಿ ಕಟ್ಟಿದಾಗ ಅದು ಕೇವಲ ತಂಗಿಯ ಕೈಯಿಂದ ಬಂದ ಉಡುಗೊರೆಯಲ್ಲ; ತನ್ನ ಬದುಕಿನಲ್ಲಿ ಈ ಸಂಬಂಧದ ಮಹತ್ವವನ್ನು ಮತ್ತೊಮ್ಮೆ ನೆನಪಿಸುವ ಪವಿತ್ರ ಕ್ಷಣ.

ರಕ್ಷಾ ಬಂಧನದ ನಿಖರ ಆರಂಭದ ವರ್ಷವನ್ನು ಅಥವಾ ಒಂದು ನಿರ್ದಿಷ್ಟ ಸ್ಥಳವನ್ನು ಇತಿಹಾಸವು ಖಚಿತವಾಗಿ ಗುರುತಿಸಿಲ್ಲ. ಆದರೆ ಇದರ ಮೂಲವನ್ನು ಪ್ರಾಚೀನ ಭಾರತೀಯ ಸಂಸ್ಕೃತಿಯಲ್ಲಿದ್ದ ರಕ್ಷಾಸೂತ್ರದ ಪರಂಪರೆಯಲ್ಲಿ ಕಾಣಬಹುದು. ಪವಿತ್ರ ದಾರವನ್ನು ಕಟ್ಟುವ ಮೂಲಕ ರಕ್ಷಣೆ, ಶುಭ, ಮಂಗಳ ಮತ್ತು ಆಶೀರ್ವಾದವನ್ನು ಕೋರುವ ಆಚರಣೆ ಭಾರತೀಯ ಸಂಸ್ಕೃತಿಯಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಕಾಲಕ್ರಮೇಣ ಈ ಆಚರಣೆ ವಿವಿಧ ರೂಪಗಳನ್ನು ಪಡೆದುಕೊಂಡು, ಸಹೋದರ ಸಹೋದರಿಯರ ನಡುವಿನ ಪ್ರೀತಿ ಮತ್ತು ಪರಸ್ಪರ ರಕ್ಷಣೆಯ ಸಂಕೇತವಾಗಿ ರಕ್ಷಾ ಬಂಧನದ ರೂಪದಲ್ಲಿ ಹೆಚ್ಚು ಜನಪ್ರಿಯವಾಯಿತು.



ಭಾರತೀಯ ಪೌರಾಣಿಕ ಪರಂಪರೆಯಲ್ಲಿ ರಕ್ಷಾಸೂತ್ರದ ಮಹತ್ವವನ್ನು ಸಾರುವ ಹಲವು ಕಥೆಗಳು ಕಂಡುಬರುತ್ತವೆ. ಅವುಗಳಲ್ಲಿ ಇಂದ್ರ ಇಂದ್ರಾಣಿಯ ಕಥೆ ಗಮನಾರ್ಹ. ದೇವಾಸುರರ ಸಂಘರ್ಷದ ಸಂದರ್ಭದಲ್ಲಿ ಇಂದ್ರನ ರಕ್ಷಣೆಗಾಗಿ ಇಂದ್ರಾಣಿ ಪವಿತ್ರ ರಕ್ಷಾಸೂತ್ರವನ್ನು ಕಟ್ಟಿದಳು ಎಂಬ ಪೌರಾಣಿಕ ನಂಬಿಕೆಯಿದೆ. ಈ ಕಥೆಯಲ್ಲಿ ರಕ್ಷಾಸೂತ್ರವು ಧೈರ್ಯ ಮತ್ತು ರಕ್ಷಣೆಯ ಸಂಕೇತವಾಗಿ



ಕಾಣುತ್ತದೆ. ಹಾಗೆಯೇ ಶ್ರೀಕೃಷ್ಣ ಮತ್ತು ದ್ರೌಪದಿಯ ಕಥೆಯೂ ಜನಮನದಲ್ಲಿ ರಕ್ಷಾ ಬಂಧನದ ಭಾವನೆಯೊಂದಿಗೆ ಗಾಢವಾಗಿ ಬೆಸೆದುಕೊಂಡಿದೆ. ಕೃಷ್ಣನ ಬೆರಳಿಗೆ ಗಾಯವಾದಾಗ ದ್ರೌಪದಿ ತನ್ನ ಸೀರೆಯ ತುಂಡಿನಿಂದ ಗಾಯವನ್ನು ಕಟ್ಟಿದಳು; ಆ ನಿಸ್ವಾರ್ಥ ಕಾಳಜಿಗೆ ಪ್ರತಿಯಾಗಿ ಕೃಷ್ಣನು ಅವಳನ್ನು ರಕ್ಷಿಸುವ ಭರವಸೆ ನೀಡಿದನೆಂಬ ಕಥೆ ಪ್ರಸಿದ್ಧವಾಗಿದೆ.

ಈ ಕಥೆಗಳನ್ನು ರಕ್ಷಾ ಬಂಧನದ ನೇರ ಐತಿಹಾಸಿಕ ಆರಂಭವೆಂದು ಹೇಳುವುದಕ್ಕಿಂತ, ಭಾರತೀಯ ಪರಂಪರೆಯಲ್ಲಿ ರಕ್ಷೆ, ಪ್ರೀತಿ ಮತ್ತು ನಂಬಿಕೆಯನ್ನು ಒಂದು ಪವಿತ್ರ ಬಂಧದ ಮೂಲಕ ವ್ಯಕ್ತಪಡಿಸುವ ಸಂಸ್ಕೃತಿ ಎಷ್ಟು ಪ್ರಾಚೀನ ಎಂಬುದನ್ನು ತೋರಿಸುವ ಪೌರಾಣಿಕ ಸಂಕೇತಗಳು ಎಂದು ಅರ್ಥಮಾಡಿಕೊಳ್ಳುವುದು ಸೂಕ್ತ.

ರಕ್ಷಾ ಬಂಧನದ ಅರ್ಥ ಕೇವಲ ಪೌರಾಣಿಕ ಕಥೆಗಳಲ್ಲಿ ಮಾತ್ರವಲ್ಲ; ಆಧುನಿಕ ಭಾರತದ ಇತಿಹಾಸದಲ್ಲಿಯೂ ರಾಖಿಗೆ ಒಂದು ವಿಶಿಷ್ಟ ಸ್ಥಾನ ದೊರೆತಿದೆ. 1905ರಲ್ಲಿ ಬ್ರಿಟಿಷರ ಬಂಗಾಳ ವಿಭಜನೆಯ ಸಂದರ್ಭದಲ್ಲಿ ರವೀಂದ್ರನಾಥ ಟ್ಯಾಗೋರ್ ಅವರು ರಾಖಿಯನ್ನು ಸಾಮಾಜಿಕ ಏಕತೆ ಮತ್ತು ಸಹೋದರತ್ವದ ಸಂಕೇತವಾಗಿ ಬಳಸಿದರೆಂಬ ಐತಿಹಾಸಿಕ ಉಲ್ಲೇಖಗಳಿವೆ. ಜನರು ಪರಸ್ಪರ ರಾಖಿ ಕಟ್ಟಿಕೊಳ್ಳುವ ಮೂಲಕ ವಿಭಜನೆಯ ವಿರುದ್ಧ ಏಕತೆಯ ಸಂದೇಶವನ್ನು ಸಾರಿದರು. ಹೀಗಾಗಿ ರಾಖಿಯ ಅರ್ಥ ಕುಟುಂಬದ ಗಡಿಯನ್ನು ದಾಟಿ ಸಮಾಜದ ಮಟ್ಟಕ್ಕೂ ವಿಸ್ತರಿಸಿತು. ಒಬ್ಬರ ಕೈಗೆ ಮತ್ತೊಬ್ಬರು ಕಟ್ಟಿದ ರಾಖಿ, "ನಮ್ಮ ನಡುವೆ ಭೇದವಿರಬಹುದು; ಆದರೆ ನಮ್ಮ ಹೃದಯಗಳು ಬೇರ್ಪಡಬಾರದು" ಎಂಬ ಮಾನವೀಯ ಸಂದೇಶವನ್ನು ಸಾರಿತು.

ಅಣ್ಣ ತಂಗಿಯರ ಸಂಬಂಧದ ಸೌಂದರ್ಯವೇ ಅದರ ಸಹಜತೆಯಲ್ಲಿ ಅಡಗಿದೆ. ಇಲ್ಲಿ ಪ್ರೀತಿಯನ್ನು ಪ್ರತಿದಿನವೂ ವ್ಯಕ್ತಪಡಿಸುವ ಅಗತ್ಯವಿಲ್ಲ. ಕೆಲವೊಮ್ಮೆ ಮಾತಿಲ್ಲದಿದ್ದರೂ ಕಾಳಜಿ ಇರುತ್ತದೆ. ದೂರವಿದ್ದರೂ ಆತ್ಮೀಯತೆ ಇರುತ್ತದೆ. ವರ್ಷಗಳ ಕಾಲ ಭೇಟಿಯಾಗದಿದ್ದರೂ ನೆನಪುಗಳು ಜೀವಂತವಾಗಿರುತ್ತವೆ. ಬಾಲ್ಯದ ದಿನಗಳು ದೂರ ಸರಿದರೂ, ಆ ದಿನಗಳಲ್ಲಿ ಕಟ್ಟಿಕೊಂಡ ಸಂಬಂಧದ ಬೇರುಗಳು ಮನಸ್ಸಿನೊಳಗೆ ಇನ್ನಷ್ಟು ಆಳವಾಗಿ ಇಳಿಯುತ್ತವೆ.

ಬಾಲ್ಯದಲ್ಲಿ ಅಣ್ಣತಂಗಿಯರ ನಡುವೆ ನಡೆಯುವ ಸಣ್ಣಪುಟ್ಟ ಜಗಳಗಳು ಮುಂದೆ ಜೀವನದ ಅತ್ಯಂತ ಸಿಹಿಯಾದ ನೆನಪುಗಳಾಗುತ್ತವೆ. ಒಮ್ಮೆ ಕಿರಿಕಿರಿಯಾಗಿದ್ದ ಮಾತುಗಳು ನಂತರ ನಗುವಿನ ಕಥೆಗಳಾಗುತ್ತವೆ. ಒಮ್ಮೆ ಸಾಮಾನ್ಯವಾಗಿ ಕಂಡ ವ್ಯಕ್ತಿಯೇ ಮುಂದೆ ಬದುಕಿನ ಅತ್ಯಂತ ಅಮೂಲ್ಯ ಸಂಬಂಧಗಳಲ್ಲಿ ಒಬ್ಬನಾಗುತ್ತಾನೆ. ಕಾಲ ಮನುಷ್ಯರನ್ನು ದೂರ ಮಾಡಬಹುದು; ಆದರೆ ಬಾಲ್ಯದ ನೆನಪುಗಳು ಸಂಬಂಧಗಳನ್ನು ಮತ್ತೆ ಮತ್ತೆ ಹತ್ತಿರ ತರುತ್ತವೆ.

ತಂಗಿಗೆ ಅಣ್ಣ ಎಂದರೆ ಕೇವಲ ರಕ್ಷಕನಲ್ಲ; ಅವಳ ಬಾಲ್ಯದ ಒಂದು ಭಾಗ, ಅವಳ ನೆನಪುಗಳ ಒಂದು ಅಧ್ಯಾಯ, ಅವಳ ಬದುಕಿನ ಒಂದು ನಂಬಿಕೆ. ಅದೇ ರೀತಿ ಅಣ್ಣನ ಪಾಲಿಗೂ ತಂಗಿ ಕೇವಲ ಸಹೋದರಿ ಅಲ್ಲ; ತನ್ನ ಬಾಲ್ಯವನ್ನು ನೆನಪಿಸುವ ಜೀವಂತ ಭಾವನೆ. ಈ ಸಂಬಂಧದಲ್ಲಿ ಅಧಿಕಾರಕ್ಕಿಂತ ಆತ್ಮೀಯತೆ ಮುಖ್ಯ, ಕರ್ತವ್ಯಕ್ಕಿಂತ ಕಾಳಜಿ ಮುಖ್ಯ, ಮಾತಿಗಿಂತ ಮೌನದ ಅರ್ಥ ದೊಡ್ಡದು.

ಆದರೆ "ರಕ್ಷಣೆ" ಎಂಬ ಪದದ ಅರ್ಥವನ್ನು ಇಂದಿನ ಕಾಲದಲ್ಲಿ ವಿಶಾಲವಾಗಿ ಅರ್ಥೈಸಬೇಕಾಗಿದೆ. ರಕ್ಷಿಸುವುದು ಎಂದರೆ ಕೇವಲ ಅಪಾಯದಿಂದ ದೂರವಿಡುವುದು ಅಲ್ಲ. ಒಬ್ಬರ ಕನಸುಗಳಿಗೆ ಮತ್ತೊಬ್ಬರು ಬೆಂಬಲವಾಗುವುದು, ನಿರಾಶೆಯ ಸಂದರ್ಭದಲ್ಲಿ ಧೈರ್ಯ ತುಂಬುವುದು, ತಪ್ಪಾದಾಗ ಪ್ರೀತಿಯಿಂದ ಎಚ್ಚರಿಸುವುದು, ಸಂಕಷ್ಟದ ಸಮಯದಲ್ಲಿ ಕೈಬಿಡದಿರುವುದು, ಯಶಸ್ಸಿನ ಸಂದರ್ಭದಲ್ಲಿ ಹೃದಯಪೂರ್ವಕವಾಗಿ ಸಂತೋಷಿಸುವುದು ಇವೆಲ್ಲವೂ ರಕ್ಷಣೆಯ ರೂಪಗಳೇ.

ಹೀಗಾಗಿ ರಕ್ಷಾ ಬಂಧನವು ಏಕಮುಖ ಸಂಬಂಧವಲ್ಲ. ಅಣ್ಣ ತಂಗಿಯನ್ನು ರಕ್ಷಿಸುವಂತೆ ತಂಗಿಯೂ ಅಣ್ಣನ ಮನಸ್ಸಿಗೆ ಆಸರೆಯಾಗಬಹುದು. ಅಣ್ಣ ತಂಗಿಯ ಬದುಕಿಗೆ ಧೈರ್ಯವಾಗುವಂತೆ ತಂಗಿಯೂ ಅಣ್ಣನ ಸಂಕಷ್ಟದಲ್ಲಿ ನಂಬಿಕೆಯಾಗಿ ನಿಲ್ಲಬಹುದು. ಇದು ಪುರುಷ ಮತ್ತು ಮಹಿಳೆಯ ನಡುವಿನ ಶ್ರೇಷ್ಠ ಸಹೋದರತ್ವದ ಸಂಬಂಧ; ಇಲ್ಲಿ ಪ್ರೀತಿಯ ಜೊತೆಗೆ ಪರಸ್ಪರ ಗೌರವಕ್ಕೂ ಸಮಾನ ಸ್ಥಾನವಿದೆ.

ಇಂದಿನ ವೇಗದ ಬದುಕಿನಲ್ಲಿ ಈ ಸಂಬಂಧದ ಸ್ವರೂಪ ಬದಲಾಗುತ್ತಿದೆ. ಶಿಕ್ಷಣ, ಉದ್ಯೋಗ, ಮದುವೆ ಮತ್ತು ಜೀವನದ ಅನಿವಾರ್ಯತೆಗಳಿಂದ ಸಹೋದರ ಸಹೋದರಿಯರು ಬೇರೆ ಬೇರೆ ಊರುಗಳಲ್ಲಿ, ನಗರಗಳಲ್ಲಿ, ದೇಶಗಳಲ್ಲಿ ಬದುಕುವುದು ಸಾಮಾನ್ಯವಾಗಿದೆ. ಒಂದೇ ಮನೆಯ ಅಂಗಳದಲ್ಲಿ ಬೆಳೆದವರು ಇಂದು ಸಾವಿರಾರು ಕಿಲೋಮೀಟರ್ ದೂರದಲ್ಲಿರಬಹುದು. ಆದರೆ ದೇಹಗಳ ನಡುವಿನ ದೂರವು ಹೃದಯಗಳ ನಡುವಿನ ದೂರವಾಗಬೇಕೆಂದಿಲ್ಲ.

ಒಂದು ಕಾಲದಲ್ಲಿ ರಾಖಿ ಕಟ್ಟಲು ತಂಗಿ ಅಣ್ಣನ ಎದುರು ಕುಳಿತುಕೊಳ್ಳುತ್ತಿದ್ದಳು. ಇಂದು ಕೆಲವೊಮ್ಮೆ ಆ ರಾಖಿ ಅಂಚೆಯ ಮೂಲಕ ಪ್ರಯಾಣಿಸುತ್ತದೆ. ಕೆಲವೊಮ್ಮೆ ಮೊಬೈಲ್ ಪರದೆಯ ಮೂಲಕ ಮುಖಗಳು ಎದುರಾಗುತ್ತವೆ. ತಂತ್ರಜ್ಞಾನ ಆಚರಣೆಯ ರೂಪವನ್ನು ಬದಲಾಯಿಸಬಹುದು; ಆದರೆ ಅದರ ಭಾವನೆಯನ್ನು ಬದಲಾಯಿಸಬಾರದು.

ಇಲ್ಲಿಯೇ ಇಂದಿನ ರಕ್ಷಾ ಬಂಧನದ ವಾಸ್ತವಿಕತೆ ನಮ್ಮ ಮುಂದೆ ಬರುತ್ತದೆ. ಹಬ್ಬಗಳು ಹೆಚ್ಚು ವೈಭವಯುತವಾಗುತ್ತಿವೆ; ರಾಖಿಗಳು ಹೆಚ್ಚು ಆಕರ್ಷಕವಾಗುತ್ತಿವೆ; ಉಡುಗೊರೆಗಳು ದುಬಾರಿಯಾಗುತ್ತಿವೆ; ಸಾಮಾಜಿಕ ಜಾಲತಾಣಗಳಲ್ಲಿ ಶುಭಾಶಯಗಳ ಮಹಾಪೂರವೇ ಹರಿಯುತ್ತಿದೆ. ಆದರೆ ಈ ಎಲ್ಲದರ ನಡುವೆ ಒಂದು ಪ್ರಶ್ನೆ ಕೇಳಿಕೊಳ್ಳಬೇಕಾಗಿದೆನಮ್ಮ ಸಂಬಂಧವೂ ಅಷ್ಟೇ ಗಟ್ಟಿಯಾಗುತ್ತಿದೆಯೇ?

ರಾಖಿಯ ಬೆಲೆ ಹೆಚ್ಚಾಗುವುದಕ್ಕಿಂತ ಸಂಬಂಧದ ಮೌಲ್ಯ ಹೆಚ್ಚಾಗಬೇಕು. ಉಡುಗೊರೆಯ ಗಾತ್ರ ಹೆಚ್ಚಾಗುವುದಕ್ಕಿಂತ ಹೃದಯದ ಕಾಳಜಿ ಹೆಚ್ಚಾಗಬೇಕು. ಸಾಮಾಜಿಕ ಜಾಲತಾಣದಲ್ಲಿ ಶುಭಾಶಯ ಹಾಕುವುದಕ್ಕಿಂತ ನಿಜ ಜೀವನದಲ್ಲಿ ಸಂಬಂಧವನ್ನು ಉಳಿಸಿಕೊಳ್ಳುವ ಪ್ರಯತ್ನ ಹೆಚ್ಚಾಗಬೇಕು.



ರಕ್ಷಾ ಬಂಧನವನ್ನು ಕೇವಲ ಒಂದು ದಿನದ ಆಚರಣೆಯಾಗಿ ಸೀಮಿತಗೊಳಿಸಿದರೆ ಅದರ ನಿಜವಾದ ಅರ್ಥ ಕುಗ್ಗುತ್ತದೆ. ವರ್ಷದಲ್ಲಿ ಒಂದು ದಿನ ರಾಖಿ ಕಟ್ಟಿಕೊಂಡು, ಉಳಿದ ದಿನಗಳಲ್ಲಿ ಪರಸ್ಪರರ ಬದುಕಿನ ಬಗ್ಗೆ ಕಾಳಜಿ ಇಲ್ಲದಿದ್ದರೆ ಆ ದಾರ ಕೇವಲ ಕೈಯನ್ನು ಅಲಂಕರಿಸುತ್ತದೆ; ಹೃದಯವನ್ನು ಅಲ್ಲ.

ರಾಖಿ ಪ್ರತಿದಿನವೂ ಕಾಣಿಸಬೇಕೆಂದಿಲ್ಲ; ಅದರ ಭಾವನೆ ಪ್ರತಿದಿನವೂ ಬದುಕಬೇಕು.

ಅಣ್ಣನಿಗೆ ತಂಗಿಯ ನೋವು ಅರ್ಥವಾಗಬೇಕು. ತಂಗಿಗೆ ಅಣ್ಣನ ಮೌನ ಅರ್ಥವಾಗಬೇಕು. ಇಬ್ಬರೂ ಪರಸ್ಪರರ ಬದುಕಿನ ನಿರ್ಧಾರಗಳನ್ನು ಗೌರವಿಸಬೇಕು. ಒಬ್ಬರ ಯಶಸ್ಸನ್ನು ಮತ್ತೊಬ್ಬರು ಅಸೂಯೆಯಿಲ್ಲದೆ ಸಂಭ್ರಮಿಸಬೇಕು. ಕಷ್ಟ ಬಂದಾಗ "ನಾನು ಇದ್ದೇನೆ" ಎಂದು ಹೇಳುವ ಧೈರ್ಯ ಸಂಬಂಧದಲ್ಲಿರಬೇಕು. ಆಗ ಮಾತ್ರ ರಕ್ಷಾ ಬಂಧನ ಒಂದು ಆಚರಣೆಯಾಗದೆ ಬದುಕಿನ ಮೌಲ್ಯವಾಗುತ್ತದೆ.

ರಕ್ಷಾ ಬಂಧನವು ನಮಗೆ ಇನ್ನೊಂದು ಮಹತ್ವದ ಸತ್ಯವನ್ನೂ ನೆನಪಿಸುತ್ತದೆ ಸಂಬಂಧಗಳು ಸ್ವಯಂ ಉಳಿಯುವುದಿಲ್ಲ; ಅವುಗಳನ್ನು ಉಳಿಸಿಕೊಳ್ಳಬೇಕು. ಕಾಲದೊಂದಿಗೆ ಎಲ್ಲವೂ ಬದಲಾಗುತ್ತದೆ. ಮನುಷ್ಯನ ಆದ್ಯತೆಗಳು ಬದಲಾಗುತ್ತವೆ. ಬದುಕಿನ ಜವಾಬ್ದಾರಿಗಳು ಹೆಚ್ಚಾಗುತ್ತವೆ. ಭೇಟಿಯಾಗುವ ಅವಕಾಶಗಳು ಕಡಿಮೆಯಾಗುತ್ತವೆ. ಆದರೆ ಸಂಬಂಧದ ಮೇಲೆ ಕಾಳಜಿ ಉಳಿದಿದ್ದರೆ ದೂರವು ಎಂದಿಗೂ ದೊಡ್ಡ ಅಂತರವಾಗುವುದಿಲ್ಲ.

ಕೆಲವು ಸಂಬಂಧಗಳು ಪ್ರತಿದಿನ ಮಾತನಾಡುವುದರಿಂದ ಗಟ್ಟಿಯಾಗುವುದಿಲ್ಲ; ಅಗತ್ಯವಿದ್ದಾಗ ಮೌನವನ್ನು ಮುರಿದು ಜೊತೆಯಾಗಿ ನಿಲ್ಲುವುದರಿಂದ ಗಟ್ಟಿಯಾಗುತ್ತವೆ.

ಅಣ್ಣತಂಗಿಯರ ಬಾಂಧವ್ಯವೂ ಅಂತಹದ್ದೇ.

ರಾಖಿಯ ದಾರ ಕೈಯಲ್ಲಿ ಕೆಲವು ದಿನಗಳಷ್ಟೇ ಉಳಿಯಬಹುದು. ಕಾಲ ಕಳೆದಂತೆ ಅದು ಕಳಚಬಹುದು. ಆದರೆ ಅದನ್ನು ಕಟ್ಟಿದ ಕ್ಷಣದಲ್ಲಿ ಹುಟ್ಟಿದ ಭಾವನೆ ಕಳಚಬಾರದು. ಕೈಯಲ್ಲಿರುವ ರಾಖಿ ಕಳಚಿದರೂ ಹೃದಯದಲ್ಲಿರುವ ಬಂಧ ಕಳಚದಿದ್ದಾಗ ಮಾತ್ರ ಆ ರಾಖಿಗೆ ಅರ್ಥ ಬರುತ್ತದೆ.

ರಾಖಿ ಸಣ್ಣದಾದರೂ ಅದರೊಳಗಿನ ಭಾವನೆ ದೊಡ್ಡದು.

ದಾರ ತೆಳುವಾದರೂ ಅದರೊಳಗಿನ ನಂಬಿಕೆ ಗಟ್ಟಿಯಾದುದು.

ಹಬ್ಬ ಒಂದು ದಿನವಾದರೂ ಅದರ ಸಂದೇಶ ಜೀವನಪೂರ್ತಿ ಉಳಿಯಬೇಕಾದುದು.

ಅಣ್ಣತಂಗಿಯರ ಸಂಬಂಧವೆಂದರೆ ಕೇವಲ ರಕ್ತದ ಸಂಬಂಧವಲ್ಲ; ಅದು ನೆನಪುಗಳ ಸಂಬಂಧ, ನಂಬಿಕೆಯ ಸಂಬಂಧ, ಕಾಳಜಿಯ ಸಂಬಂಧ, ಪರಸ್ಪರರ ಬದುಕಿನಲ್ಲಿ ಆಸರೆಯಾಗುವ ಸಂಬಂಧ.

ಆದ್ದರಿಂದ ರಕ್ಷಾ ಬಂಧನದಂದು ಮಣಿಕಟ್ಟಿಗೆ ರಾಖಿ ಕಟ್ಟುವಾಗ ಕೇವಲ ಒಂದು ಸಂಪ್ರದಾಯವನ್ನು ಪಾಲಿಸದೆ, ಒಂದು ಸಂಬಂಧವನ್ನು ಮತ್ತೊಮ್ಮೆ ನೆನಪಿಸಿಕೊಳ್ಳೋಣ. ಹಳೆಯ ಮುನಿಸುಗಳನ್ನು ಬದಿಗಿಡೋಣ. ದೂರವನ್ನು ಕಡಿಮೆ ಮಾಡೋಣ. ಮಾತು ಕಡಿಮೆಯಾಗಿದ್ದರೆ ಮಾತು ಆರಂಭಿಸೋಣ. ಸಂಬಂಧದಲ್ಲಿ ಬಿರುಕು ಬಂದಿದ್ದರೆ ಪ್ರೀತಿಯಿಂದ ಅದನ್ನು ತುಂಬೋಣ.

ಏಕೆಂದರೆ ಬದುಕಿನಲ್ಲಿ ಹಣವನ್ನು ಮತ್ತೆ ಸಂಪಾದಿಸಬಹುದು; ಕಳೆದುಕೊಂಡ ವಸ್ತುಗಳನ್ನು ಮತ್ತೆ ಪಡೆಯಬಹುದು; ಆದರೆ ಕಳೆದುಹೋದ ಸಮಯವನ್ನು ಮರಳಿ ಪಡೆಯಲು ಸಾಧ್ಯವಿಲ್ಲ. ಅದೇ ರೀತಿ ಒಮ್ಮೆ ಕಳೆದುಕೊಂಡ ಆತ್ಮೀಯ ಸಂಬಂಧವನ್ನು ಹಿಂದಿನಂತೆಯೇ ಮರಳಿ ಪಡೆಯುವುದು ಯಾವಾಗಲೂ ಸಾಧ್ಯವಿಲ್ಲ.

ರಕ್ಷಾ ಬಂಧನವೆಂದರೆ ಕೈಗೆ ಕಟ್ಟುವ ರಾಖಿಯಲ್ಲ; ಹೃದಯಕ್ಕೆ ಕಟ್ಟಿಕೊಳ್ಳುವ ನಂಬಿಕೆ.

ರಕ್ಷಾ ಬಂಧನವೆಂದರೆ ರಕ್ಷಣೆಯ ಭರವಸೆ ಮಾತ್ರವಲ್ಲ; ಪರಸ್ಪರರ ಬದುಕಿನಲ್ಲಿ ಎಂದಿಗೂ ಕೈಬಿಡದಿರುವ ವಾಗ್ದಾನ.

ರಾಖಿಯ ಪ್ರತಿಯೊಂದು ಗಂಟು ಪ್ರೀತಿಯ ಸಂಕೇತವಾಗಲಿ.

ಪ್ರತಿಯೊಂದು ನೂಲು ನಂಬಿಕೆಯ ಬಂಧವಾಗಲಿ.

ಪ್ರತಿಯೊಂದು ರಾಖಿ ಸಂಬಂಧಗಳನ್ನು ನೆನಪಿಸುವ ಸೇತುವೆಯಾಗಲಿ.

ಅಣ್ಣ ತಂಗಿಯರ ಬಾಂಧವ್ಯ ಕಾಲದ ಎಲ್ಲ ಪರೀಕ್ಷೆಗಳನ್ನು ಮೀರಿ ಸದಾ ಹಸಿರಾಗಿರಲಿ.

ರಾಖಿಯ ದಾರದಲ್ಲಿ ಬೆಸೆದ ಈ ಬಂಧ

ಕೈಯಿಂದ ಕಳಚಬಹುದು; ಆದರೆ ಹೃದಯದಿಂದ ಎಂದಿಗೂ ಕಳಚದಿರಲಿ. ರಕ್ಷಾ ಬಂಧನದ ಹಾರ್ದಿಕ ಶುಭಾಶಯಗಳು.


ಲೇಖನ
– ಪ್ರಶಾಂತ ಕುಲಕರ್ಣಿ.
ಉಪನ್ಯಾಸಕರು
ಶ್ರೀ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯ
ಸಿಂದಗಿ. ವಿಜಯಪುರ ಜಿಲ್ಲೆ
ಮೊ :9845442237




---



ಕಲಬುರಗಿ: ನಗರದ ಗಾಜಿಪುರ ಪ್ರದೇಶದ ಹನುಮಾನ ದೇವಸ್ಥಾನ ಬಳಿ ಇರುವ ಕೃಷಿಕಲ್ಪ ಫೌಂಡೇಷನ್ ಸಂಸ್ಥೆಯ ಕಚೇರಿಯಲ್ಲಿ ಇಂದು ಸಂಸ್ಥೆಯ ಸ್ಟಾಟ್‌ಅಪ್ ಪೊಡಕ್ಟ್ ಅನ್ನು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಅವರು ಬಿಡುಗಡೆ ಮಾಡಿದರು.ಸಂಸ್ಥೆಯ ಅಧಿಕಾರಿಗಳು,ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ದಾನದಲ್ಲಿ ಶ್ರೇಷ್ಠದಾನ ನೇತ್ರದಾನ: ಡಾ.ಕವಿತಾ ಪಾಟೀಲ



ಕಲಬುರಗಿ:ದಾನದಲ್ಲಿ ಶ್ರೇಷ್ಠವಾದ ದಾನ ನೇತ್ರದಾನ ಎಂದು ಜಿಮ್ಸ್ ಆಸ್ಪತ್ರೆಯ ನೇತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ.ಕವಿತಾ ಪಾಟೀಲ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮ ಹಾಗೂ ಜಿಮ್ಸ್ ಜಿಲ್ಲಾ ಆಸ್ಪತ್ರೆ ನೇತ್ರಾ ವಿಭಾಗದ ಸಹಯೋಗದಲ್ಲಿ ಜಿಮ್ಸ್ ಆಸ್ಪತ್ರೆಯ ಓಪಿಡಿ ವಿಭಾಗದ ಆವರಣದಲ್ಲಿ ಹಮ್ಮಿಕೊಂಡಿದ್ದ 41ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಏನಾದರು ಒಳ್ಳೆಯ ಕಾರ್ಯ ಮಾಡಬೇಕೆಂದರೆ ಅದು ನೇತ್ರಾದಾನ ಮಾತ್ರ. ಹುಟ್ಟುತ್ತ ಕುರುಡತ್ವದಲ್ಲಿ ಬೆಳೆದಿರುವವರ ಬಾಳಲ್ಲಿ ಬೆಳಕು ಆಗಬೇಕಾದರೆ ಮರಣದ ನಂತರ ನೇತ್ರಾದಾನ ಮಾಡುವುದರಿಂದ ಅಂಧತ್ವ ನಿವಾರಣೆ ಆಗುತ್ತದೆ. ಬದುಕು ಸಾರ್ಥಕವಾಗಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಮತ್ತು ಜಿಲ್ಲಾ ಅಂಧತ್ವ ಕಾರ್ಯಕ್ರಮ ಅಧಿಕಾರಿ ಡಾ.ರವಿಕಾಂತಿ ಕ್ಯಾತನಾಳ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ದಾನದಲ್ಲಿ ಶ್ರೇಷ್ಠ ದಾನ ನೇತ್ರದಾನದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ದೃಷ್ಟಿಗಾಗಿ ರೋಲ್ ಪ್ಲೇ ಮತ್ತು ಜನ ಜಾಗೃತಿ ಪ್ಲೇಕಾರ್ಡ್ ಪ್ರದರ್ಶಿಸಲಾಯಿತು. ಪರಂಗಣದಲ್ಲಿ ಹಾಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಓಪಿಡಿ ಸರ್ಜನ್ ಡಾ.ಶಾಲಿನಿ ಸಜ್ಜನಶೆಟ್ಟಿ, ನೇತ್ರ ವಿಭಾಗದ ವೈದ್ಯರುಗಳಾದ ಡಾ.ರಾಜೇಶ್ವರಿ ಮಹಾಂತಗೋಳ , ಡಾ.ಶೃತಿ ಬಾಡದ್, ಡಾ.ಜಬೇರ್, ಡಾ.ರಾಜಾಕ್, ಮೊಬೈಲ್ ಯೂನಿಟ್ ವೈದ್ಯರಾದ ಡಾ.ಶ್ರೀದೇವಿ, ನೇತ್ರಾಧಿಕಾರಿಗಳಾದ ವೀರಣ್ಣ ಎಸ್ ಕುಂಬಾರ, ಬಾಲಭೀಮ್ ಶಿರಸಗಿ , ಜಿಲ್ಲಾ ಸೈಕಾಲಜಿಸ್ಟ್ ಕೌನ್ಸಿಲರ್ ಮಂಜುನಾಥ್ ಕಂಬಾಳಿಮಠ ಮತ್ತು ಜಿಮ್ಸ್ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ಹಾಗೂ ಮತ್ತಿತರರು ಪಾಲ್ಗೊಂಡಿದ್ದರು.


# ಚಾತುರ್ಮಾಸ್ಯದ ಪುಣ್ಯಸಾನ್ನಿಧ್ಯಕ್ಕೆ ಭಕ್ತರ ಮುದ್ದೇಬಿಹಾಳ ಯಾತ್ರೆ



ಕಲಬುರಗಿ: ಪಾವನ ಚಾತುರ್ಮಾಸ್ಯ ವ್ರತದ ಅಂಗವಾಗಿ ವಿದ್ಯಾಕಣ್ವವಿರಾಜ ತೀರ್ಥ ಶ್ರೀಪಾದಂಗಳವರು ಮುದ್ದೇಬಿಹಾಳ ಕ್ಷೇತ್ರದಲ್ಲಿ ಕೈಗೊಂಡಿರುವ ಸಪ್ತಮ ಚಾತುರ್ಮಾಸ್ಯ ಸಂಕಲ್ಪದ ಹಿನ್ನೆಲೆಯಲ್ಲಿ, ಶ್ರೀಪಾದಂಗಳವರ ದರ್ಶನ ಹಾಗೂ ಶ್ರೀ ವಿಠ್ಠಲಕೃಷ್ಣನ ವಿಶೇಷ ಅನುಗ್ರಹ ಪಡೆಯಲು ಬುಧವಾರ (ಆ.26) ಬೆಳಿಗ್ಗೆ ಕಲಬುರಗಿಯಿಂದ ಭಕ್ತರ ದಂಡು ಮುದ್ದೇಬಿಹಾಳಕ್ಕೆ ಭಕ್ತಿಪೂರ್ವಕ ಯಾತ್ರೆ ಕೈಗೊಳ್ಳಲಾಗಿದೆ ಎಂದು ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಸೇವಾ ಸಮಿತಿ ಅಧ್ಯಕ್ಷ ಮಲ್ಹಾರರಾವ ಗಾರಂಪಳ್ಳಿ ಹೇಳಿದರು.

ಚಾತುರ್ಮಾಸ್ಯ ವ್ರತಸಂಕಲ್ಪ ಪೂಜನೀಯ ವಿದ್ಯಾಕಣ್ವವಿರಾಜ ತೀರ್ಥ ಶ್ರೀಪಾದಂಗಳವರು ಮುದ್ದೆಬಿಹಾಳ ಕ್ಷೇತ್ರದಲ್ಲಿ 52 ದಿನಗಳ ಕಾಲ ಚಾತುರ್ಮಾಸ್ಯ ವ್ರತಸಂಕಲ್ಪ ಕೈಗೊಂಡಿದ್ದು. ಈ ಅವಧಿಯಲ್ಲಿ ಧಾರ್ಮಿಕ ಮುದ್ದೆಬಿಹಾಳ ಕ್ಷೇತ್ರದಲ್ಲಿ ಶ್ರೀಪಾದಂಗಳವರ ದರ್ಶನ ಹಾಗೂ ಆಶೀರ್ವಾದ ಪಡೆಯುವುದರೊಂದಿಗೆ, ಶ್ರೀ ವಿಠ್ಠಲಕೃಷ್ಣನ ಸಂಸ್ಥಾನ ಪೂಜೆಯ ಮಹಾದರ್ಶನ, ಪಾದಪೂಜೆ, ಮುದ್ರಾಧಾರಣ, ಸಂಜಾತ, ತುಲಾಭಾರ ಪವಿತ್ರ ಧಾರ್ಮಿಕ ಸೇವೆಗಳಲ್ಲಿ ಭಾಗವಹಿಸುವ ಅವಕಾಶ ಭಕ್ತರಿಗೆ ದೊರೆಯಲಿದೆ ಎಂದು ಹೇಳಿದರು. ಬೆಳಿಗ್ಗೆ 5 ಗಂಟೆಗೆ 50ಕ್ಕೂ ಹೆಚ್ಚು ಯಾತ್ರಾರ್ತಿಗಳು ಜೇವರಗಿ ರಸ್ತೆಯ ಶ್ರೀರಾಮ ಮಂದಿರದಿಂದ ವಾಹನ ಪೂಜೆ, ಶ್ರೀ ಸೂರ್ಯ ನಾರಾಯಣ ಭಗವಾನ ಕಿ ಜೈ, ಶ್ರೀಯೋಗೀಶ್ವರ ಯಾಜ್ಞವಲ್ಕ್ಯ ಮಹಾರಾಜ ಕಿ ಜೈ ಜಯ ಘೋಷಗಳೊಂದಿಗೆ, ಈ ಯಾತ್ರೆಯಲ್ಲಿ ಅಪಾರ ಸಂಖ್ಯೆಯ ಭಕ್ತರು ಉತ್ಸಾಹ ಹಾಗೂ ಭಕ್ತಿಭಾವದಿಂದ ಪಾಲ್ಗೊಂಡರು. ಪ್ರಮುಖರಾದ ಚಂದ್ರಕಾಂತ ಗದಾರ್, ಭೀಮಸೇನರಾವ್ ಸಿಂದಗಿರಿ, ಶಾಮಾಚಾರ್ಯ ಜೋಶಿ ವನದುರ್ಗ, ಗೋಪಾಲರಾವ್, ಸುಧೀರ್ ಕುಲಕರ್ಣಿ, ಪ್ರಾಣೇಶಾಚಾರ್ಯ ಬೈಚಬಾಳ, ಮಾರ್ಥಾಂಡ ಹೇಮನೂರು, ವಿನುತ ಜೋಶಿ, ವೆಂಕಟೇಶ್ ಕುಲಕರ್ಣಿ, ಸುರೇಶ್ ಕುಲಕರ್ಣಿ, ವಾಸುದೇವರಾವ್, ಸತ್ಯನಾರಾಯಣ ಕುಲಕರ್ಣಿ, ಪ್ರಾಣೇಶ್ ಭೂಸನೂರ, ಜಯಾಚಾರ್ಯ ಬೈಚಬಾಳ, ಗುರುರಾಜ ಕುಲಕರ್ಣಿ, ಸತೀಶ್ ಅಗ್ನಿಹೋತ್ರ, ಸುವರ್ಣ ಕುಲಕರ್ಣಿ, ಸುನಂದಾ ಜೋಶಿ, ಲಕ್ಷ್ಮೀ ಶಾಖಿ, ಅರುಣಾ ಕುಲಕರ್ಣಿ, ರಜನಿ, ರೇಣುಕಾ, ಪ್ರಾರ್ಥನಾ ಸೇರಿದಂತೆ ಭಕ್ತರು ಯಾತ್ರೆಯಲ್ಲಿ ಭಾಗಿಯಾದರು.

# ಸಿಯುಕೆಯ ಮೂವರು ವಿದ್ಯಾರ್ಥಿಗಳಿಗೆ ಪಿಎಚ್.ಡಿ



ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು (ಸಿಯುಕೆ) ಯಶಸ್ವಿಯಾಗಿ ಮೂವರು ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಮಹಾಪ್ರಬಂಧ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಭೌತ ವಿಜ್ಞಾನಗಳ ನಿಕಾಯದ ಗಣಿತಶಾಸ್ತ್ರ ವಿಭಾಗ ಮತ್ತು ಭೂ–ವಿಜ್ಞಾನ ನಿಕಾಯದ ಭೂಗೋಳಶಾಸ್ತ್ರದ ವಿಭಾಗದ ವಿದ್ಯಾರ್ಥಿಗಳಿಗೆ ಪಿ.ಎಚ್.ಡಿ ಪದವಿಯನ್ನು ಪ್ರದಾನ ಮಾಡಿ ಘೋಷಿಸಿದೆ.

ಅತಿರಾ ವಿ.ಎಸ್ ಅವರು, ಭೌತ ವಿಜ್ಞಾನಗಳ ನಿಕಾಯದ, ಗಣಿತಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾಗಿದ್ದು "ಇನ್ವೆಸ್ಟಿಗೇಷನ್ ಆನ್ ಕಂಟ್ರೋಲ್ಯಾಬಿಲಿಟಿ ಆಂಡ್ ಅಬ್ಸರವ್ಯಾಬಿಲಿಟಿ ಪ್ರಾಪರ್ಟಿಸ್ ಇನ್ ಎ ಕ್ಲಾಸ್ ಆಫ್ ಹೆಟೆರೋಜಿನಿಯಸ್ ಮಲ್ಟಿ ಏಜೆಂಟ್ ಸಿಸ್ಟಮ್ಸ್" ಎಂಬ ವಿಷಯದ ಮೇಲೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಇವರು ಗಣಿತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಜಿ.ಜನಾರ್ಧನ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ಕೈಗೊಂಡಿದ್ದರು.

ಇರ್ಷಾದ ತಾರ್ಯಾಲ್ ಭೂ–ವಿಜ್ಞಾನ ನಿಕಾಯದ ಭೂಗೋಳಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾಗಿದ್ದು, "ಅಸೆಸ್ಮೆಂಟ್ ಆಫ್ ಸ್ಟೇಟಸ್ ಆಂಡ್ ಚಾಲೆಂಜಸ್ ಇನ್ ಸಾಲಿಡ್ ವೇಸ್ಟ್ ಮ್ಯಾನೇಜ್ಮೆಂಟ್ ಇನ್ ಕಲಬುರಗಿ ಸಿಟಿ ಯುಸಿಂಗ್ ಜಿಐಎಸ್" ಎಂಬ ವಿಷಯದ ಮೇಲೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಇವರು ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಬಿ.ಮಹಾಲಿಂಗಂ ಅವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ಕೈಗೊಂಡಿದ್ದರು.

ಹರೆಕೃಷ್ಣ ಮನ್ನಾ ಅವರು ಭೂ–ವಿಜ್ಞಾನ ನಿಕಾಯದ ಭೂಗೋಳಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾಗಿದ್ದು "ಚಾಲೆಂಜಸ್ ಆಫ್ ಅರ್ಬನ್ ಲ್ಯಾಂಡ್ಸ್ಕೇಪ್ ಮೋರ್ಫೋ ಲೊಜಿ ಆಂಡ್ ಇಟ್ಸ್ ಅಸೋಸಿಯೇಷನ್ ವಿತ್ ಅರ್ಬನ್ ಇನಿವಿರೋನ್ಮೆಂಟ್, ಹೆಲ್ತ್ ಆಂಡ್ ವೆಲ್ ಬಿಯಿಂಗ್ : ಎ ಕೇಸ್ ಸ್ಟಡಿ ಆಫ್ ಎನ್ ಇಂಡಸ್ಟ್ರೀಯಲ್ ಸಿಟಿ ಅಸನಸೋಲ್, ವೆಸ್ಟ್ ಬೆಂಗಾಲ್" ಎಂಬ ವಿಷಯದ ಮೇಲೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಇವರು ಭೂಗೋಳಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಸಂಜಿತ್ ಸರ್ಕಾರ ಅವರ ಮಾರ್ಗದರ್ಶನದಲ್ಲಿ ಸಂಶೋಧನೆಯನ್ನು ಕೈಗೊಂಡಿದ್ದರು.

ವಿ.ವಿ.ಯ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಪಿ.ಹೆಚ್.ಡಿ ಪದವಿ ಪಡೆದ ಮೂವರು ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ಅವರ ಮಾರ್ಗದರ್ಶಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

# ವಯೋಮಿತಿ ನಿಗದಿಯಲ್ಲಿ ಅನ್ಯಾಯ: ಶಶೀಲ್ ನಮೋಶಿ



ಕಲಬುರಗಿ: ಶಾಲಾ ಶಿಕ್ಷಣ ಇಲಾಖೆ 15,000ಶಿಕ್ಷಕರನೇಮಕಾತಿಗೆಹೊರಡಿಸಿರುವ ಆದೇಶದಲ್ಲಿ ವಯೋಮಿತಿಯನ್ನು ಸಾಮಾನ್ಯ ವರ್ಗಕ್ಕೆ40, ಒಬಿಸಿಗೆ 43, ಎಸಿ–ಎಸ್‌ಟಿ ಹಾಗೂ ಪ್ರವರ್ಗ–1ಕ್ಕೆ 45 ವರ್ಷ ನಿಗದಿಪಡಿಸಿ ಅನ್ಯಾಯ ಮಾಡಿ ಪದವೀಧರ ಶಿಕ್ಷಕ ಆಕಾಂಕ್ಷಿಗಳ ಭವಿಷ್ಯಕ್ಕೆ ಕೊಡಲಿಪೆಟ್ಟು ಕೊಟ್ಟಿದೆ ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ ನಮೋಶಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಸರಕಾರ ಡಿಪಿಆಇಲಾಖೆ ಕಳೆದ ಮಾ.29ರಂದು ವಿಶೇಷರಾಜ್ಯಪತ್ರಿಕೆಹೊರಡಿಸಿ31–12–2027ರವರೆಗೆ ನಡೆಯಲಿರುವ ನೇರ ನೇಮಕಾತಿಗಳಿಗೆ 5 ವರ್ಷ ಸಡಿಲಿಕೆ ನೀಡಿ ಆದೇಶ ಹೊರಡಿಸಿತ್ತು.

ಸರಕಾರದ ಈ ಆದೇಶವನ್ನು ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಪರಿಗಣನೆಗೆ ತೆಗೆದುಕೊಳ್ಳದೆ ತಪ್ಪು ನಿರ್ಧಾರ ಕೈಗೊಂಡಿದ್ದು ಡಿಪಿಆರ್ ಆದೇಶ ಉಲ್ಲಂಘನೆ ಮಾಡಿದಂತಾಗಿದೆ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ವಸತಿ ಶಿಕ್ಷಣ ಸಂಘ ಕಳೆದ ಜುಲೈ 10 ರಂದು ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಿ ಡಿಪಿಆರ್ ಇಲಾಖೆ ನಿಯಮದಂತೆ 5 ವರ್ಷ ಹೆಚ್ಚಿಸಿ ಸಾಮಾನ್ಯ ವರ್ಗಕ್ಕೆ 45 ಒಬಿಸಿಗೆ 48 ಎಸಿ/ಎಸ್‌ಟಿ ಹಾಗೂ ಪ್ರವರ್ಗ–1 ಕ್ಕೆ 50 ವರ್ಷ ನಿಗದಿಪಡಿಸಿರುವರು. ಅದರಂತೆ ಶಿಕ್ಷಣ ಇಲಾಖೆ ಕೂಡ ವಯೋಮಿತಿಗೆ ಸಂಬಂಧಿಸಿದಂತೆ ಮಾಡಿರುವ ತಪ್ಪನ್ನು ತಕ್ಷಣ ಸರಿಪಡಿಸಿ ಸದ್ಯ ಹೊರಡಿಸಿರುವ ಅಧಿಸೂಚನೆಗೆ ತಿದ್ದುಪಡಿ ಪತ್ರ ಹೊರಡಿಸಬೇಕು.

ಲೋಪದೋಷ ಸರಿಪಡಿಸದಿದ್ದರೆ ಪದವೀಧರ ಶಿಕ್ಷಕ ಆಕಾಂಕ್ಷಿಗಳು ಬೀದಿಗಿಳಿದು ಹೋರಾಟ ಮಾಡುವ ಸನ್ನಿವೇಶ ನಿರ್ಮಾಣ ಆಗಲಿದೆ ಎಂದು ಸರಕಾರಕ್ಕೆ ಎಚ್ಚರಿಸಿದ್ದಾರೆ.

# ತನಿಖೆ ಪೂರ್ಣಗೊಳ್ಳುವವರೆಗೆ ನಾಗೇಂದ್ರರಿಗೆ ಯಾವುದೇ ಸ್ಥಾನ ಬೇಡ: ದೇವೀಂದ್ರ



ಕಲಬುರಗಿ : ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣ ದುರುಪಯೋಗ ಪ್ರಕರಣದ ತನಿಖೆ ಪೂರ್ಣಗೊಳ್ಳುವವರೆಗೆ ಬಿ. ನಾಗೇಂದ್ರ ಅವರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಯಾವುದೇ ಸಚಿವ ಸ್ಥಾನ ಅಥವಾ ಮಹತ್ವದ ಜವಾಬ್ದಾರಿ ನೀಡಬಾರದು ಎಂದು ಕರ್ನಾಟಕ ಬಿಜೆಪಿ ಓಬಿಸಿ ಮೋರ್ಚಾ ಕಲಬುರಗಿ ನಗರಾಧ್ಯಕ್ಷ ದೇವೀಂದ್ರ ದೇಸಾಯಿ ಕಲ್ಲೂರ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿದ್ದ ಸಾರ್ವಜನಿಕ ಹಣದ ದುರುಪಯೋಗದ ಆರೋಪಗಳು ಅತ್ಯಂತ ಗಂಭೀರವಾಗಿವೆ. ಬಡ ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗೆ ಮೀಸಲಾದ ಹಣದ ಬಗ್ಗೆ ಇಂತಹ ಆರೋಪಗಳು ಕೇಳಿಬಂದಿರುವುದು ಅತ್ಯಂತ ವಿಷಾದನೀಯ. ಈ ಪ್ರಕರಣದ ತನಿಖೆ ಇನ್ನೂ ನಡೆಯುತ್ತಿರುವ ಸಂದರ್ಭದಲ್ಲಿ ಬಿ. ನಾಗೇಂದ್ರ ಅವ–ರಿಗೆ ಮತ್ತೆ ಯಾವುದೇ ಅಧಿಕಾರ ಅಥವಾ ಸ್ಥಾನಮಾನ ನೀಡುವುದು ನೈತಿಕವಾಗಿ ಸರಿಯಲ್ಲ. ರಾಜ್ಯ ಸರ್ಕಾರ ಜನರ ವಿಶ್ವಾಸವನ್ನು ಉಳಿಸಬೇಕಾದರೆ ತನಿಖೆ ಪೂರ್ಣಗೊಳ್ಳುವವರೆಗೆ ಅವರನ್ನು ಯಾವುದೇ ಹುದ್ದೆಯಿಂದ ದೂರವಿಡಬೇಕು ಎಂದು ಒತ್ತಾಯಿಸಿದರು. ರಾಜ್ಯ ಸರ್ಕಾರ ಪಾರದರ್ಶಕ ಹಾಗೂ ನಿಷ್ಪಕ್ಷಪಾತ ತನಿಖೆಗೆ ಸಂಪೂರ್ಣ ಸಹಕಾರ ನೀಡಬೇಕು. ತಪ್ಪಿತಸ್ಥರು ಯಾರೇ ಆಗಿರಲಿ, ಅವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಜರುಗಿಸಬೇಕು. ಪರಿಶಿಷ್ಟ ಪಂಗಡದ ಜನರ ಕಲ್ಯಾಣ–ಕ್ಕಾಗಿ ಮೀಸಲಾದ ಪ್ರತಿಯೊಂದು ರೂಪಾಯಿಯೂ ಅರ್ಹ ಫಲಾನುಭವಿಗಳಿಗೆ ತಲುಪಬೇಕು. ಸಾರ್ವಜನಿಕರ ಹಣದ ದುರುಪಯೋಗಕ್ಕೆ ಯಾ–ರಿಗೂ ರಕ್ಷಣೆ ಸಿಗಬಾರದು ಎಂದು ಹೇಳಿದರು. ಇದೇ ವೇಳೆ, ಕಾಂಗ್ರೆಸ್ ಸರ್ಕಾರ ನೈತಿಕ ಹೊಣೆಗಾ–ರಿಕೆ ಪ್ರದರ್ಶಿಸಬೇಕಿದ್ದು, ತನಿಖೆ ಪೂರ್ಣಗೊಂಡು ಸತ್ಯಾಂಶ ಹೊರಬರುವವರೆಗೆ ಬಿ. ನಾಗೇಂದ್ರ ಅವ–ರಿಗೆ ಯಾವುದೇ ಸಚಿವ ಸ್ಥಾನ ಅಥವಾ ಮಹತ್ವದ ಸ್ಥಾನಮಾನ ನೀಡದಿರುವ ಮೂಲಕ ಉತ್ತಮ ಆಡಳಿತದ ಸಂದೇಶ ನೀಡಬೇಕು ಎಂದು ದೇವೀಂದ್ರ ದೇಸಾಯಿ ಕಲ್ಲೂರ ಆಗ್ರಹಿಸಿದರು.

# ಪತ್ನಿ, ಮಗಳ ಕೊಂದವನಿಗೆ ಜೀವಾವಧಿ ಶಿಕ್ಷೆ

ಕಲಬುರಗಿ: ಪತ್ನಿ ಮತ್ತು 11 ವರ್ಷದ ಮಗಳನ್ನು ಕೊಲೆಗೈದ ಅಪರಾಧಿಗೆ ಜೀವಾವಧಿ ಶಿಕ್ಷೆ ವಿಧಿಸಿ ಸೇಡಂ ಪೀಠದ 4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಸಿರಾಜುದ್ದೀನ್ ಎ. ಅವರು ಆದೇಶಿಸಿದ್ದಾರೆ.

ಕಲಬುರಗಿಯ ದಿಗಂಬರ ಶಿಕ್ಷೆಗೀಡಾದ ವ್ಯಕ್ತಿ. ದಿಗಂಬರನು ತನ್ನ ಪತ್ನಿ ಜಗದೀಶ್ವರಿ, 11 ವರ್ಷದ ಪುತ್ರಿಯನ್ನು ಕೊಲೆಗೈದಿದ್ದ. ದಿಗಂಬರ ಜತೆ ಸೇಡಂನ ಜಗದೀಶ್ವರಿ ಮದುವೆಯಾಗಿದ್ದು, 11 ವರ್ಷದ ಪುತ್ರಿ ಇದ್ದಳು. ಎರಡು ವರ್ಷದಿಂದ ಪತ್ನಿಯ ಶೀಲ ಶಂಕಿಸಿ ನಿತ್ಯ ಕಿರುಕುಳ ನೀಡುತ್ತಿದ್ದ. ಜಗದೀಶ್ವರಿ ಕುಟುಂಬಸ್ಥರು ತಿಳಿವಳಿಕೆ ಹೇಳಿದ್ದರೂ ಕಿರುಕುಳ ಮುಂದುವರಿಸಿದ್ದ. ತಾಳಲಾರದೆ ಜಗದೀಶ್ವರಿ ಮತ್ತು ಪುತ್ರಿಯನ್ನು ಸೇಡಂನಲ್ಲಿ ಬಾಡಿಗೆ ಮನೆಯಲ್ಲಿ ಇಡಲಾಗಿತ್ತು. ಅಲ್ಲೂ ಕಿರುಕುಳ ನೀಡುತ್ತಿದ್ದ.

2021ರ ಸೆ.22ರಂದು ರಾತ್ರಿ ದಿಗಂಬರ ಜಗಳ ತೆಗೆದಿದ್ದಾಗ ಜಗದೀಶ್ವರಿ ತವರು ಮನೆಯವರು ತಿಳಿವಳಿಕೆ ಹೇಳಿ ಹೋಗಿದ್ದರು.

# ಸಂತ ಶ್ರೀ ಆಸಾರಾಮ್ ಜೀ ಮಾನವ ಉತ್ಥಾನ ಟ್ರಸ್ಟ್ ವತಿಯಿಂದ ರಕ್ಷಾ ಬಂಧನದ ಪಾವನ ಹಬ್ಬ ಆಚರಣೆ



ಕಲಬುರಗಿ:ಸಂತ ಶ್ರೀ ಆಸಾರಾಮ್ ಜೀ ಮಾನವ ಉತ್ಥಾನ ಟ್ರಸ್ಟ್ ಕಲಬುರಗಿ ಶಾಖೆ ವತಿಯಿಂದ ಪೂಜ್ಯ ಸಂತ ಶ್ರೀ ಆಸಾರಾಮ್ ಜೀ ಬಾಪೂಜಿ ಅವರ ಪಾವನ ಪ್ರೇರಣೆಯಿಂದ ಕಲಬುರಗಿ ನಗರ ಪೊಲೀಸ್ ಆಯುಕ್ತರು, ಇತರೆ ಸುರಕ್ಷಾ ಸಿಬ್ಬಂದಿ ಮತ್ತು ಸಂಚಾರ ಸುರಕ್ಷಾ ಸಿಬ್ಬಂದಿಯೊಂದಿಗೆ ರಕ್ಷಾಬಂಧನದ ಪಾವನ ಹಬ್ಬವನ್ನು ಆಚರಿಸಲಾಯಿತು.

ಅದರಲ್ಲಿ ಅವರ ಉತ್ತಮ ಆರೋಗ್ಯ, ಅವರ ಸುರಕ್ಷತೆ, ಅವರ ಬುದ್ಧಿಯಲ್ಲಿ ಭಗವತ್ ಚಿಂತನೆ ಮತ್ತು ಅವರ ನಿರ್ಧಾರ ಶಕ್ತಿಯ ವಿಕಾಸವಾಗಲಿ ಮತ್ತು ಸಮಾಜಕ್ಕೆ ಅವರು ನೀಡುತ್ತಿರುವ ಕೊಡುಗೆಗಾಗಿ, ಇಡೀ ಕಲಬುರಗಿ ನಗರದ ಪರವಾಗಿ ಸಂತ ಶ್ರೀ ಆಸಾರಾಮ್ ಜೀ ಆಶ್ರಮದ ಸಹೋದರಿಯರಿಂದ ಅವರಿಗಾಗಿ ಶುಭ ಸಂಕಲ್ಪ ಮಾಡಲಾಯಿತು.

ಪೂಜ್ಯ ಬಾಪೂಜಿ ಅವರ ಪ್ರೇರಣೆಯಿಂದ ಅವರ ಜೀವನದಲ್ಲಿಯೂ ಎಲ್ಲಾ ರೀತಿಯ ಸುಖ–ಸಮೃದ್ಧಿ, ಉನ್ನತಿಯ ಪ್ರಾಪ್ತಿಯಾಗಲಿ ಎಂಬ ಸಂಕಲ್ಪ ಮತ್ತು ಸಂದೇಶದೊಂದಿಗೆ ಎಲ್ಲಾ ಸಹೋದರಿಯರು ಇತರೆ ಎಲ್ಲಾ ಸುರಕ್ಷಾ ಸಿಬ್ಬಂದಿಯೊಂದಿಗೆ ರಕ್ಷಾಬಂಧನದ ಪಾವನ ಹಬ್ಬವನ್ನು ಆಚರಿಸಿದರು.

ಜೊತೆಗೆ ಅವರ ಜೀವನದ ವಿಕಾಸಕ್ಕಾಗಿ ಪೂಜ್ಯ ಬಾಪೂಜಿ ಅವರು ತಿಳಿಸಿದ ಸತ್ಸಂಗ ಪ್ರವಚನಗಳಿಂದ ಸಂಕಲಿಸಲಾದ ಸತ್ಸಂಗ ಪುಸ್ತಕವನ್ನೂ ಅವರಿಗೆ ನೀಡಲಾಯಿತು. ಅದರ ಶ್ರವಣ–ಮನನ ಮಾಡುವುದರಿಂದ ಅವರಿಗೂ ಜೀವನದಲ್ಲಿ ಶಾಂತಿಯ ಅನುಭೂತಿ ಆಗಲಿ, ಅವರ ಈ ಅತ್ಯಂತ ಬಿಡುವಿಲ್ಲದ ಮತ್ತು ತನ್ಮಯತೆಯ ಜೀವನದಲ್ಲಿ ಅವರಿಗೂ ಭಗವಂತನ ಚಿಂತನೆ, ಶಾಂತಿ, ಆನಂದದ ಒಂದು ಮೂಲ ದೊರೆಯಲಿ ಎಂಬ ಸಂಕಲ್ಪದಿಂದ ಎಲ್ಲಾ ಸಹೋದರಿಯರು ಅವರಿಗೆ ರಕ್ಷಾ–ಸೂತ್ರವನ್ನು ಕಟ್ಟಿದರು. ಜೊತೆಗೆ ಅವರಿಗೆ ಸತ್–ಸಾಹಿತ್ಯ ಮತ್ತು ವಾತಾವರಣದ ಶುದ್ಧತೆ, ಪವಿತ್ರತೆ ಹಾಗೂ ಮನೆಯ ನಕಾರಾತ್ಮಕತೆ ದೂರವಾಗಲಿ ಎಂಬ ಕಾರಣಕ್ಕಾಗಿ ತುಳಸಿ ಗಿಡವನ್ನೂ ಅರ್ಪಿಸಲಾಯಿತು.

ಪ್ರತಿ ವರ್ಷ ಬಾಪೂಜಿ ಅವರ ಭಕ್ತರಿಂದ ಕಲಬುರಗಿ ನಗರದ ವಿವಿಧ ಸುರಕ್ಷಾ ಸಿಬ್ಬಂದಿಯೊಂದಿಗೆ ರಕ್ಷಾಬಂಧನ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಿಂದೆಯೂ ಸೆಂಟ್ರಲ್ ಜೈಲ್ ಮತ್ತು ಕೈದಿಗಳಿಗಾಗಿಯೂ ಶುಭ ಸಂಕಲ್ಪದಿಂದ ಅವರೊಂದಿಗೆ ರಕ್ಷಾಬಂಧನ ಕಾರ್ಯಕ್ರಮವನ್ನು ಆಚ–ರಿಸಲಾಗಿದೆ.

ಇದೇ ಕಾರ್ಯಕ್ರಮದ ಅಡಿಯಲ್ಲಿ ಈ ವರ್ಷ ನಗರದ ವಿವಿಧ ಸುರಕ್ಷಾ ಸಿಬ್ಬಂದಿಯೊಂದಿಗೆ ಆಗಸ್ಟ್ 25 ರಿಂದ ಈ ಕಾರ್ಯಕ್ರಮದ ಸರಣಿಯನ್ನು ಇಡಲಾಗಿದೆ.

ಈ ವರ್ಷ ರಕ್ಷಾಬಂಧನದ ಪಾವನ ಹಬ್ಬವನ್ನು 28ನೇ ತಾರೀಖಿನಂದು ಆಚರಿಸಬೇಕು, ಏಕೆಂದರೆ ವೈದಿಕ ಗಣನೆಯ ಪ್ರಕಾರ 27ನೇ ತಾರೀಖಿನ ದಿನ ಭದ್ರಾ ಇರುವುದರಿಂದ ಈ ಯೋಗದಲ್ಲಿ ರಕ್ಷಾಬಂಧನ ಹಬ್ಬವನ್ನು ಆಚರಿಸಬಾರದು, ಏಕೆಂದರೆ ಹಾಗೆ ಮಾಡಿದರೆ ಯಾ–ರಿಗೆ ನಾವು ರಕ್ಷಾ–ಸೂತ್ರವನ್ನು ಕಟ್ಟುತ್ತೇವೆಯೋ ಅವರಿಗೆ ಯಾವುದೇ ರೀತಿಯ ಆಘಾತವಾಗುವ ಸಾಧ್ಯತೆ ಇರುತ್ತದೆ ಎಂದು ವೈದಿಕ ಗಣನೆ ಹೇಳುತ್ತದೆ.

ಈ ವರ್ಷ ಎಲ್ಲಾ ಸಾಧಕರು ಹರ್ಷೋಲ್ಲಾಸದಿಂದ 28 ಆಗಸ್ಟ್ ರಂದು ಪೂರ್ಣ ದಿನ ರಕ್ಷಾಬಂಧನದ ಪಾವನ ಹಬ್ಬವನ್ನು ಆಚರಿಸಬಹುದು. ನಗರದ ಎಲ್ಲಾ ನಿವಾಸಿಗಳಿಗೆ ರಕ್ಷಾಬಂಧನ ಹಬ್ಬದ ಶುಭಾಶಯಗಳನ್ನು ಸಂತ ಶ್ರೀ ಆಸಾರಾಮ್ ಜೀ ಮಾನವ ಉತ್ಥಾನ ಟ್ರಸ್ಟ್, ಕಲಬುರಗಿ ವತಿಯಿಂದ ಹಾರ್ದಿಕವಾಗಿ ಕೋರಲಾಗಿದೆ.

# ಅಂಗಾಂಗ ದಾನದ ಮಹತ್ವದ ಅರಿವಿನ ಕೊರತೆಯಿಂದ ಅಗತ್ಯವಿರುವ ರೋಗಿಗಳಿಗೆ ಜೀವ ವಂಚನೆ: ಡಾ. ಮಂಜುನಾಥ ದೋಶೆಟ್ಟಿ

ಕಲಬುರಗಿ: ಅಂಗಾಂಗ ದಾನದ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಅರಿವಿನ ಕೊರತೆಯಿಂದಾಗಿ ಹೃದಯ, ಯಕೃತ್ತು, ಮೂತ್ರಪಿಂಡ, ಮೇದೋಜೀರಕ ಗ್ರಂಥಿ, ಚರ್ಮ ಸೇರಿದಂತೆ ಜೀವ ಉಳಿಸುವ ಅಂಗಾಂಗಗಳ ತುರ್ತು ಅಗತ್ಯವಿರುವ ಅನೇಕ ರೋಗಿಗಳು ಅಂಗಾಂಗಗಳ ಕೊರತೆಯಿಂದಾಗಿ ಜೀವನ ಕಳೆದುಕೊಳ್ಳುವಂತಾಗಿದೆ ಎಂದು ಖ್ಯಾತ ಮೂತ್ರಪಿಂಡ ತಜ್ಞ ಹಾಗೂ ಅಂಗಾಂಗ ಕಸಿ ಪರಿಣಿತ ಡಾ. ಮಂಜುನಾಥ ದೋಶೆಟ್ಟಿ ವಿಷಾದ ವ್ಯಕ್ತಪಡಿಸಿದರು.

ನಗರದ ಶರಣಬಸವ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಮಂಗಳವಾರ ಜೀವನ ಆಧಾರ ಫೌಂಡೇಶನ್, ಚಿರಾಯು ಆಸ್ಪತ್ರೆ ಹಾಗೂ ಶರಣಬಸವ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಿದ್ದ "ವಿಶ್ವ ಅಂಗಾಂಗ ದಾನಿಗಳ ದಿನಾಚರಣೆ" ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲಬುರಗಿ ನಗರದಲ್ಲಿ ಯಶಸ್ವಿಯಾಗಿ ಅನೇಕ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಗಳನ್ನು ನಡೆಸಿರುವುದಾಗಿ ತಿಳಿಸಿದರು. ಚಿರಾಯು ಆಸ್ಪತ್ರೆಯ ಅಧ್ಯಕ್ಷರೂ ಆಗಿರುವ ಡಾ. ದೋಶೆಟ್ಟಿ, ಪ್ರತಿವರ್ಷ ಜೀವ ಉಳಿಸುವ ಅಂಗಾಂಗಗಳ ಕಸಿ ಅಗತ್ಯವಿರುವ ಸಾವಿರಾರು ಗಂಭೀರ ಸ್ಥಿತಿಯ ರೋಗಿಗಳು ಸೂಕ್ತ ಅಂಗಾಂಗಗಳು ಲಭ್ಯವಾಗದ ಕಾರಣದಿಂದಾಗಿ ಸಾವನ್ನಪ್ಪುತ್ತಿದ್ದಾರೆ ಎಂದು ಹೇಳಿದರು.

ಮಿದುಳು ನಿಷ್ಕ್ರಿಯಗೊಂಡ (ಬ್ರೇನ್ ಡೆಡ್) ವ್ಯಕ್ತಿಗಳ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಹೃದಯ, ಯಕೃತ್ತು, ಮೂತ್ರಪಿಂಡ, ಮೇದೋಜೀರಕ ಗ್ರಂಥಿ, ಶ್ವಾಸಕೋಶ ಸೇರಿದಂತೆ ವಿವಿಧ ಅಂಗಾಂಗಗಳ ತುರ್ತು ಕಸಿ ಅಗತ್ಯವಿರುವ ರೋಗಿಗಳ ಜೀವ ಉಳಿಸಬಹುದು ಎಂಬ ಅರಿವು ಇನ್ನೂ ಅನೇಕರಲ್ಲಿ ಇಲ್ಲ "ಮಿದುಳು ನಿಷ್ಕ್ರಿಯಗೊಂಡ ತಮ್ಮ ಆತ್ಮೀಯರ ಅಂಗಾಂಗಗಳನ್ನು ದಾನ ಮಾಡುವುದರಿಂದ, ಅವರ ಪ್ರೀತಿಪಾತ್ರರು ಸಾವಿನ ನಂತರವೂ ಮತ್ತೊಬ್ಬರ ದೇಹದಲ್ಲಿ ಜೀವಂತವಾಗಿರುತ್ತಾರೆ ಎಂಬುದನ್ನು ಪೋಷಕರು ಹಾಗೂ ಸಂಬಂಧಿಕರು ಅರಿತುಕೊಳ್ಳಬೇಕು" ಎಂದು ಡಾ. ದೋಶೆಟ್ಟಿ ಹೇಳಿದರು.

ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯಿಂದ ಸಂಗ್ರಹಿಸಲಾದ ಮೂತ್ರಪಿಂಡವನ್ನು ವಿಜಯಪುರದಿಂದ ಕಲಬುರಗಿಗೆ ತಂದು, ಜೀವನ್ಮರಣದ ಹೋರಾಟದಲ್ಲಿದ್ದ ಮಹಿಳಾ ರೋಗಿಗೆ ಯಶಸ್ವಿಯಾಗಿ ಕಸಿ ಮಾಡಲು ಅನುಕೂಲವಾಗುವಂತೆ ಗ್ರೀನ್ ಕಾರಿಡಾರ್ ಮೂಲಕ ಸಂಚಾರಕ್ಕೆ ಯಾವುದೇ ಅಡಚಣೆಯಾಗದಂತೆ ಮಾರ್ಗ ಕಲ್ಪಿಸಲು ಶ್ರಮಿಸಿದ ಕಲಬುರಗಿ ಸಂಚಾರ ಪೊಲೀಸ್ ಠಾಣೆಯ ಸರ್ಕಲ್ ಇನಸ್ಪೆಕ್ಟರ್ ಶಕೀಲ್ ಅಂಗಡಿ, ಸಿಎಆರನ ರಿಸರ್ವ್ ಪೊಲೀಸ್ ಇಸ್ಪೆಕ್ಟರ್ ಮಹಾದೇವ ಪಾಟೀಲ ಸೇರಿದಂತೆ ಇತರ ಮೂವರು ಪೊಲೀಸ್ ಸಿಬ್ಬಂದಿಯನ್ನು ಡಾ. ದೋಶೆಟ್ಟಿ, ಶರಣಬಸವ ವಿಶ್ವವಿದ್ಯಾಲಯದ ಅಧಿಕಾ–ರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸನ್ಮಾನಿಸಿದರು.

ಅಗತ್ಯವಿರುವ ರೋಗಿಯ ಜೀವ ಉಳಿಸಲು ಗ್ರೀನ್ ಕಾರಿಡಾರ್ ಮೂಲಕ ಯಾವುದೇ ಸಂಚಾರ ಅಡಚಣೆಯಾಗದಂತೆ ಗೌರವಿಸಲಾಯಿತು.

# ರಕ್ಷಾ ಬಂಧನ: ಪ್ರೀತಿ, ವಿಶ್ವಾಸ ಮತ್ತು ರಕ್ಷಣೆಯ ಅನನ್ಯ ಬಂಧ



## ಇಂದು (ಆಗಸ್ಟ್ 28, ಶುಕ್ರವಾರ) 'ರಕ್ಷಾ ಬಂಧನ' ಹಬ್ಬದ ಪ್ರಯುಕ್ತ ಈ ವಿಶೇಷ ಲೇಖನ

■ ಉದಯರಶ್ಮಿ ದಿನಪತ್ರಿಕೆ

ಭಾರತವು ಹಬ್ಬಗಳ ನಾಡು. ಇಲ್ಲಿನ ಪ್ರತಿಯೊಂದು ಹಬ್ಬವೂ ಕೇವಲ ಆಚರಣೆಗೆ ಸೀಮಿತವಾಗದೆ, ಮಾನವೀಯ ಮೌಲ್ಯಗಳು, ಕುಟುಂಬ ಸಂಬಂಧಗಳು, ಸಂಸ್ಕೃತಿ ಮತ್ತು ಸಾಮಾಜಿಕ ಏಕತೆಯನ್ನು ಬಲಪಡಿಸುವ ಮಹತ್ವದ ಸಂದೇಶವನ್ನು ಹೊತ್ತಿದೆ. ಅಂತಹ ಪವಿತ್ರ ಹಬ್ಬಗಳಲ್ಲಿ ರಕ್ಷಾ ಬಂಧನ ಅತ್ಯಂತ ವಿಶೇಷವಾದದ್ದು. ಸಹೋದರ ಸಹೋದರಿಯರ ಪ್ರೀತಿ, ವಿಶ್ವಾಸ, ಆತ್ಮೀಯತೆ ಮತ್ತು ಪರಸ್ಪರ ರಕ್ಷಣೆಯ ಭಾವನೆಯನ್ನು ಪ್ರತಿಬಿಂಬಿಸುವ ಈ ಹಬ್ಬವು ಭಾರತೀಯ ಸಂಸ್ಕೃತಿಯ ಭಾವನಾತ್ಮಕ ಶ್ರೀಮಂತಿಕೆಗೆ ಜೀವಂತ ಸಾಕ್ಷಿಯಾಗಿದೆ.

ರಕ್ಷಾ ಬಂಧನ ಎಂದರೆ ಕೇವಲ ಸಹೋದರಿಯೊಬ್ಬಳು ಸಹೋದರನ ಕೈಗೆ ರಾಖಿ ಕಟ್ಟುವ ಆಚರಣೆ ಮಾತ್ರವಲ್ಲ. ಇದು "ನಿನ್ನ ಸುಖದುಃಖಗಳಲ್ಲಿ ನಾನು ನಿನ್ನೊಂದಿಗೆ ಇದ್ದೇನೆ; ನಿನ್ನ ಗೌರವ, ಸುರಕ್ಷತೆ ಮತ್ತು ಸಂತೋಷಕ್ಕಾಗಿ ನಾವು ಪರಸ್ಪರ ಬದ್ಧರಾಗಿದ್ದೇವೆ" ಎಂಬ ಆಳವಾದ ಭಾವನೆಯ ಸಂಕೇತವಾಗಿದೆ.

### ರಕ್ಷಾ ಬಂಧನದ ಅರ್ಥವೇನು?

'ರಕ್ಷಾ' ಎಂದರೆ ರಕ್ಷಣೆ, ಸುರಕ್ಷತೆ ಮತ್ತು ಕಾಳಜಿ. 'ಬಂಧನ' ಎಂದರೆ ಬಾಂಧವ್ಯ ಅಥವಾ ಸಂಬಂಧ. ಹೀಗಾಗಿ ರಕ್ಷಾ ಬಂಧನ ಎಂದರೆ ಪ್ರೀತಿ ಮತ್ತು ವಿಶ್ವಾಸದಿಂದ ಕಟ್ಟಲ್ಪಟ್ಟ ರಕ್ಷಣೆಯ ಪವಿತ್ರ ಸಂಬಂಧ ಎಂದು ಅರ್ಥೈಸಬಹುದು.

ಶ್ರಾವಣ ಮಾಸದ ಪೂರ್ಣಿಮೆಯಂದು ಆಚರಿಸಲಾಗುವ ಈ ಹಬ್ಬದಲ್ಲಿ ಸಹೋದರಿ ತನ್ನ ಸಹೋದರನ ಕೈಗೆ ರಾಖಿ ಕಟ್ಟುತ್ತಾಳೆ. ಸಹೋದರನು ತನ್ನ ಸಹೋದರಿಯ ಗೌರವ ಮತ್ತು ಸುರಕ್ಷತೆಯನ್ನು ಕಾಪಾಡುವ ಸಂಕಲ್ಪ ಮಾಡುತ್ತಾನೆ. ಸಿಹಿ ಹಂಚಿಕೊಂಡು, ಉಡ–ುಗೊರೆ ನೀಡಿ, ಪರಸ್ಪರ ಶುಭಾಶಯ ಕೋರುವ ಮೂಲಕ ಕುಟುಂಬದ ಪ್ರೀತಿಯ ಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲಾಗುತ್ತದೆ.

ಆದರೆ ಇಂದಿನ ಸಮಾಜದಲ್ಲಿ ರಕ್ಷಾ ಬಂಧನದ ಅರ್ಥವನ್ನು ಇನ್ನಷ್ಟು ವಿಶಾಲವಾಗಿ ನೋಡಬೇಕಾಗಿದೆ. ರಕ್ಷಣೆ ಎಂಬುದು ಕೇವಲ ಪುರುಷನ ಹೊಣೆಗಾರಿಕೆಯಲ್ಲ; ಸಹೋದರಿಯೂ ಸಹೋದರನ ಬದುಕಿನಲ್ಲಿ ಪ್ರೀತಿ, ಮಾರ್ಗದರ್ಶನ, ಧೈರ್ಯ ಮತ್ತು ಮಾನಸಿಕ



ಬೆಂಬಲದ ಶಕ್ತಿಯಾಗಿರುತ್ತಾಳೆ. ಆದ್ದರಿಂದ ರಕ್ಷಾ ಬಂಧನವು ಪರಸ್ಪರ ಗೌರವ ಮತ್ತು ಪರಸ್ಪರ ಜವಾಬ್ದಾರಿಯ ಹಬ್ಬವಾಗಿದೆ.

### ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ

ರಕ್ಷಾ ಬಂಧನದ ಕುರಿತು ಭಾರತೀಯ ಇತಿಹಾಸ ಮತ್ತು ಪುರಾಣಗಳಲ್ಲಿ ಹಲವಾರು ಕಥೆಗಳು ಕಂಡುಬರುತ್ತವೆ. ಈ ಕಥೆಗಳು ಕಾಲಕ್ರಮೇಣ ಜನಪದ ನಂಬಿಕೆಗಳು ಮತ್ತು ಸಂಸ್ಕೃತಿಯೊಂದಿಗೆ ಬೆರೆತು ಈ ಹಬ್ಬಕ್ಕೆ ವಿಶೇಷ ಮಹತ್ವವನ್ನು ನೀಡಿವೆ.

### ಶ್ರೀಕೃಷ್ಣ ಮತ್ತು ದ್ರೌಪದಿಯ ಬಾಂಧವ್ಯ

ರಕ್ಷಾ ಬಂಧನದೊಂದಿಗೆ ಹೆಚ್ಚು ಜನಪ್ರಿಯವಾಗಿ ಸಂಬಂಧಿಸಲ್ಪಡುವ ಕಥೆ ಶ್ರೀಕೃಷ್ಣ ಮತ್ತು ದ್ರೌಪದಿಯದು. ಒಂದು ಸಂದರ್ಭದಲ್ಲಿ ಶ್ರೀಕೃಷ್ಣನ ಕೈಗೆ ಗಾಯವಾಗಿ ರಕ್ತ ಹರಿಯುತ್ತಿದ್ದಾಗ,



ದ್ರೌಪದಿ ತನ್ನ ವಸ್ತ್ರದ ಒಂದು ಭಾಗವನ್ನು ಹರಿದು ಗಾಯಕ್ಕೆ ಕಟ್ಟಿದಳು ಎಂಬ ಜನಪ್ರಿಯ ಪೌರಾಣಿಕ ಪರಂಪರೆ ಇದೆ. ಆ ಪ್ರೀತಿಯ ಮತ್ತು ಕಾಳಜಿಯ ಋಣವನ್ನು ಶ್ರೀಕೃಷ್ಣ ತನ್ನ ಜೀವನದಲ್ಲಿ ದ್ರೌಪದಿಗೆ ರಕ್ಷಣೆ ನೀಡುವ ಮೂಲಕ ತೀರಿಸಿದನೆಂಬ ನಂಬಿಕೆ ಇದೆ.

ಈ ಕಥೆಯ ಮೂಲಕ ರಕ್ಷಾ ಬಂಧನವು ರಕ್ತ ಸಂಬಂಧಕ್ಕಿಂತಲೂ ಪ್ರೀತಿ ಮತ್ತು ವಿಶ್ವಾಸದ ಸಂಬಂಧವೇ ದೊಡ್ಡದು ಎಂಬ ಸಂದೇಶವನ್ನು ಸಾರುತ್ತದೆ.

### ಯಮ ಮತ್ತು ಯಮುನೆಯ ಕಥೆ

ಮತ್ತೊಂದು ಪೌರಾಣಿಕ ನಂಬಿಕೆಯ ಪ್ರಕಾರ, ಯಮುನಾ ತನ್ನ ಸಹೋದರ ಯಮನಿಗೆ ರಾಖಿ ಕಟ್ಟಿದಳು. ಯಮುನಾ ತೋರಿದ ಪ್ರೀತಿ ಮತ್ತು ಆತ್ಮೀಯತೆಯಿಂದ ಸಂತೋಷಗೊಂಡ ಯಮನು, ತನ್ನ ಸಹೋದರಿಯ ಪ್ರೀತಿಯ ಬಂಧವನ್ನು ಗೌರವಿಸುವವರಿಗೆ ದೀರ್ಘಾಯುಷ್ಯ ಮತ್ತು ಶುಭವಾಗಲಿ ಎಂದು ಆಶೀರ್ವದಿಸಿದನೆಂಬ ನಂಬಿಕೆ ಇದೆ.

ಈ ಕಥೆಯ ಸಾರಾಂಶವೇನೆಂದರೆಸಂಬಂಧಗಳ ನಿಜವಾದ ಸಂಪತ್ತು ಪ್ರೀತಿ, ಆತ್ಮೀಯತೆ ಮತ್ತು ಪರಸ್ಪರ ಕಾಳಜಿಯಲ್ಲಿದೆ.

### ರಾಣಿ ಕರ್ಣಾವತಿ ಮತ್ತು ಹುಮಾಯೂನ್

ರಕ್ಷಾ ಬಂಧನದ ಇತಿಹಾಸದ ಕುರಿತು ಪ್ರಸಿದ್ಧವಾಗಿರುವ ಮತ್ತೊಂದು ಜನಪ್ರಿಯ ಕಥೆ ಮೇವಾರದ ರಾಣಿ ಕರ್ಣಾವತಿ ಮತ್ತು ಮೊಘಲ್ ಚಕ್ರವರ್ತಿ ಹುಮಾಯೂನ್ ಅವರೊಂದಿಗೆ ಸಂಬಂಧಿಸಿದೆ. ಸಂಕಷ್ಟದ ಸಂದರ್ಭದಲ್ಲಿ ರಾಣಿ ಕರ್ಣಾವತಿ ಹುಮಾಯೂನ್‌ಗೆ ರಾಖಿ ಕಳುಹಿಸಿ ನೆರವಿನ ಮನವಿ ಮಾಡಿದಳು ಎಂಬ ಪ್ರಸಿದ್ಧ ಐತಿಹಾಸಿಕ ಪರಂಪರೆ ಇದೆ. ಈ ಘಟನೆಯ ಐತಿಹಾಸಿಕ ವಿವರಗಳ ಕುರಿತು ವಿಭಿನ್ನ ಅಭಿಪ್ರಾಯಗಳಿದ್ದರೂ, ಜನಪ್ರಿಯ ಕಥನದಲ್ಲಿ ಇದು ಧರ್ಮ, ಜಾತಿ ಮತ್ತು ರಾಜಕೀಯ ಗಡಿಗಳನ್ನು ಮೀರಿ ಮಾನವೀಯ ಸಂಬಂಧದ ಮಹತ್ವವನ್ನು ತೋರಿಸುವ ಉದಾಹರಣೆಯಾಗಿ ನೆನಪಾಗುತ್ತದೆ.

### ಕೇವಲ ಸಹೋದರ ಸಹೋದರಿಯರ ಹಬ್ಬವಲ್ಲ

ರಕ್ಷಾ ಬಂಧನವನ್ನು ಸಾಂಪ್ರದಾಯಿಕವಾಗಿ ಸಹೋದರ ಸಹೋದರಿಯರ ಹಬ್ಬವೆಂದು ಆಚರಿಸಲಾಗುತ್ತದೆ. ಆದರೆ ಇದರ ಮೂಲ ಸಂದೇಶವನ್ನು ಗಮನಿಸಿದರೆ, ಇದು ಪ್ರತಿಯೊಬ್ಬರನ್ನೂ ಪರಸ್ಪರ ರಕ್ಷಣೆ, ಗೌರವ ಮತ್ತು ಪ್ರೀತಿಯ ಕಡೆಗೆ ಕರೆದೊಯ್ಯುವ ಸಾಮಾಜಿಕ ಹಬ್ಬವಾಗಿದೆ.

ಇಂದು ಅನೇಕ ಕಡೆಗಳಲ್ಲಿ ಮಹಿಳೆಯರು ಸೈನಿಕರಿಗೆ ರಾಖಿ ಕಟ್ಟುತ್ತಾರೆ. ಪೊಲೀಸರು, ವೈದ್ಯರು, ರೈತರು, ಸಮಾಜ ಸೇವಕರು ಮತ್ತು ದೇಶದ ರಕ್ಷಣೆಗೆ ನಿಂತಿರುವವರಿಗೂ ಗೌರವ ಸೂಚಕವಾಗಿ ರಾಖಿ ಕಟ್ಟುವ ಪದ್ಧತಿ ಬೆಳೆಯುತ್ತಿದೆ. ಇದು ರಕ್ಷಾ ಬಂಧನದ ಭಾವನೆ ಕುಟುಂಬದ ನಾಲ್ಕು ಗೋಡೆಗಳಿಂದ ಹೊರಬಂದು ಸಮಾಜ ಮತ್ತು ರಾಷ್ಟ್ರದ ಏಕತೆಯ ಹಬ್ಬವಾಗಿ ಬೆಳೆಯುತ್ತಿರುವುದನ್ನು ಸೂಚಿಸುತ್ತದೆ.

### ಇಂದಿನ ಸಮಾಜಕ್ಕೆ ರಕ್ಷಾ ಬಂಧನ ನೀಡುವ ಸಂದೇಶ

ಆಧುನಿಕ ಸಮಾಜದಲ್ಲಿ ಮಹಿಳೆಯರ ಸುರಕ್ಷತೆ, ಗೌರವ ಮತ್ತು ಸಮಾನತೆ ಕುರಿತು ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ರಕ್ಷಾ ಬಂಧನವನ್ನು ಕೇವಲ ಒಂದು ದಿನದ ಆಚ–ರಣೆಯಾಗಿ ನೋಡದೆ, ಅದರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಗತ್ಯ.

ಸಹೋದರಿಯ ಕೈಗೆ ರಾಖಿ ಕಟ್ಟಿಸಿಕೊಂಡು ಉಡುಗೊರೆ ನೀಡುವುದು ಮಾತ್ರ ರಕ್ಷಣೆಯ ಭರವಸೆಯಲ್ಲ. ನಿಜವಾದ ರಕ್ಷಣೆ ಎಂದರೆ

**ಮಹಿಳೆಯರ ಗೌರವವನ್ನು ಕಾಪಾಡುವುದು.**

ಅವರ ಸ್ವಾತಂತ್ರ್ಯ ಮತ್ತು ಅಭಿಪ್ರಾಯಗಳನ್ನು ಗೌರವಿಸುವುದು.

ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಮಾನ ಅವಕಾಶಗಳನ್ನು ನೀಡುವುದು.




ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಯುವುದು.

ಸಂಕಷ್ಟದಲ್ಲಿರುವವರಿಗೆ ನೆರವಾಗುವುದು.

ಕುಟುಂಬದಲ್ಲಿ ಪ್ರೀತಿ ಮತ್ತು ವಿಶ್ವಾಸದ ವಾತಾವರಣ ನಿರ್ಮಿಸುವುದು.

ಪ್ರತಿಯೊಬ್ಬ ಹೆಣ್ಣುಮಗುವಿನ ಸುರಕ್ಷತೆಯನ್ನು ಸಮಾಜದ ಜವಾಬ್ದಾರಿಯೆಂದು ಪರಿಗಣಿಸುವುದು.

ರಾಖಿ ಕೈಗೆ ಕಟ್ಟುವ ದಾರ ಮಾತ್ರವಲ್ಲ; ಅದು ನಮ್ಮ ಮನಸ್ಸಿಗೆ ಕಟ್ಟಿಕೊಳ್ಳಬೇಕಾದ ಜವಾಬ್ದಾರಿಯ ದಾರವಾಗಿದೆ.

### ರಕ್ಷಾ ಬಂಧನ ಮತ್ತು ರಾಷ್ಟ್ರೀಯ ಏಕತೆ

ಭಾರತವು ವಿವಿಧ ಭಾಷೆ, ಧರ್ಮ, ಜಾತಿ ಮತ್ತು ಸಂಸ್ಕೃತಿಗಳ ದೇಶವಾಗಿದೆ. ಈ ವೈವಿಧ್ಯತೆಯ ನಡುವೆಯೂ ನಮ್ಮನ್ನು ಒಗ್ಗೂಡಿಸುವ ಶಕ್ತಿ ಮಾನವೀಯತೆ ಮತ್ತು ಪರಸ್ಪರ ಪ್ರೀತಿಯಾಗಿದೆ. ರಕ್ಷಾ ಬಂಧನದಂತಹ ಹಬ್ಬಗಳು "ನಾವು ಒಬ್ಬರಿಗೊಬ್ಬರು" ಎಂಬ ಭಾವನೆಯನ್ನು ಬಲಪಡಿಸುತ್ತವೆ.

ಒಬ್ಬರ ಸುರಕ್ಷತೆಗಾಗಿ ಮತ್ತೊಬ್ಬರು ನಿಲ್ಲುವ ಮನೋಭಾವ ಬೆಳೆದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಗಡಿಯಲ್ಲಿ ದೇಶವನ್ನು ಕಾಯುವ ಸೈನಿಕನಿಂದ ಹಿಡಿದು, ರಸ್ತೆಯಲ್ಲಿ ಅಪಾಯದಲ್ಲಿರುವ ಅಪರಿಚಿತ ವ್ಯಕ್ತಿಗೆ ನೆರವಾಗುವ ಸಾಮಾನ್ಯ ನಾಗ–ರಿಕನ ತನಕ ರಕ್ಷಣೆಯ ನಿಜವಾದ ಅರ್ಥ ಮಾನವೀಯತೆಯಲ್ಲಿದೆ.

### ಸಂಬಂಧಗಳ ಮೌಲ್ಯವನ್ನು ನೆನಪಿಸುವ ಹಬ್ಬ

ಇಂದಿನ ವೇಗದ ಜೀವನದಲ್ಲಿ ಅನೇಕ ಕುಟುಂಬಗಳು ಉದ್ಯೋಗ, ವ್ಯವಹಾರ ಮತ್ತು ವೈಯಕ್ತಿಕ ಜೀವನದ ಒತ್ತಡದಿಂದ ಸಂಬಂಧಗಳಿಗೆ ಸಮಯ ನೀಡಲು ಸಾಧ್ಯವಾಗುತ್ತಿಲ್ಲ. ಮೊಬೈಲ್ ಮತ್ತು ಸಾಮಾಜಿ–ಕ ಜಾಲತಾಣಗಳು ನಮ್ಮನ್ನು ಸಂಪರ್ಕದಲ್ಲಿಟ್ಟಿದ್ದರೂ, ಹೃದಯಗಳ ನಡುವಿನ ಅಂತರವನ್ನು ಕೆಲವೊಮ್ಮೆ ಹೆಚ್ಚಿಸುತ್ತಿವೆ.

ಇಂತಹ ಸಂದರ್ಭದಲ್ಲಿ ರಕ್ಷಾ ಬಂಧನವು ಕುಟುಂಬದ ಸದಸ್ಯರನ್ನು ಮತ್ತೆ ಒಂದೇ ಕಡೆ ಸೇರಿಸುವ ಅವಕಾಶವಾಗಿದೆ. ಬಾಲ್ಯದ ನೆನಪುಗಳು, ಪರಸ್ಪರ ಪ್ರೀತಿ, ಕಷ್ಟದ ಸಮಯದಲ್ಲಿ ನೀಡಿದ ಸಹಾಯ ಮತ್ತು ಜೀವನದ ಪಯಣದಲ್ಲಿ ಒಬ್ಬರಿಗೊಬ್ಬರು ನೀಡಿದ ಬೆಂಬಲವನ್ನು ನೆನಪಿಸಿಕೊಳ್ಳುವ ದಿನವಾಗಿದೆ.

### ನಿಜವಾದ ರಾಖಿ ಯಾವುದು?

ಕೈಗೆಕಟ್ಟುವರೇಷ್ಮೆದಾರಕೆಲವೇದಿನಗಳಲ್ಲಿಹಳೆಯದಾಗಬಹುದು. ಆದರೆ ಹೃದಯದಲ್ಲಿ ಕಟ್ಟುವ ಪ್ರೀತಿ, ವಿಶ್ವಾಸ ಮತ್ತು ಜವಾಬ್ದಾರಿ ಜೀವನಪೂರ್ತಿ ಉಳಿಯಬೇಕು.

ಸಹೋದರಿ ಸುರಕ್ಷಿತಳಾಗಿದ್ದರೆ ಅದು ರಕ್ಷಾ ಬಂಧನದ ಗೆಲುವು.

ಸಹೋದರ ಗೌರವದಿಂದ ಬದುಕುತ್ತಿದ್ದರೆ ಅದು ರಕ್ಷಾ ಬಂಧನದ ಹೆಮ್ಮೆ.

ಕುಟುಂಬದಲ್ಲಿ ಪ್ರೀತಿ ಉಳಿದಿದ್ದರೆ ಅದು ರಕ್ಷಾ ಬಂಧನದ ನಿಜವಾದ ಆಚರಣೆ.

ಸಮಾಜದಲ್ಲಿ ಮಹಿಳೆಯರಿಗೆ ಗೌರವ ದೊರೆತರೆ ಅದು ರಕ್ಷಾ ಬಂಧನದ ನಿಜವಾದ ಅರ್ಥ.

ಸಮಾರೋಪ ರಕ್ಷಾ ಬಂಧನವು ಭಾರತೀಯ ಸಂಸ್ಕೃತಿಯಲ್ಲಿನ ಅತ್ಯಂತ ಭಾವನಾತ್ಮಕ ಮತ್ತು ಅರ್ಥಪೂರ್ಣ ಹಬ್ಬವಾಗಿದೆ. ಇದು ಕೇವಲ ರಾಖಿ ಕಟ್ಟುವ ಸಂಪ್ರದಾಯವಲ್ಲ; ಪ್ರೀತಿ, ವಿಶ್ವಾಸ, ತ್ಯಾಗ, ಕಾಳಜಿ ಮತ್ತು ಜವಾಬ್ದಾರಿಯ ಸಂಕಲ್ಪವಾಗಿದೆ.

ಈ ಪವಿತ್ರ ಹಬ್ಬದ ಸಂದರ್ಭದಲ್ಲಿ ಪ್ರತಿಯೊಬ್ಬರೂ ಒಂದು ಸಂಕಲ್ಪ ಮಾಡೋಣ ನಮ್ಮ ಮನೆಯ ಸಹೋದರಿ ಮಾತ್ರವಲ್ಲ, ಸಮಾಜದ ಪ್ರತಿಯೊಬ್ಬ ಮಹಿಳೆ ಮತ್ತು ಹೆಣ್ಣುಮಗುವಿನ ಗೌರವ ಹಾಗೂ ಸುರಕ್ಷತೆಗಾಗಿ ನಾವು ಜವಾಬ್ದಾರಿಯಿಂದ ನಿಲ್ಲೋಣ.

ಕೈಗೆ ಕಟ್ಟುವ ರಾಖಿಗಿಂತ ಹೃದಯದಲ್ಲಿ ಕಟ್ಟುವ ಮಾನವೀಯತೆ ದೊಡ್ಡದು. ಸಂಬಂಧಗಳನ್ನು ಕಾಪಾಡುವ ಪ್ರೀತಿ ದೊಡ್ಡದು. ಸಂಕಷ್ಟದಲ್ಲಿ ಜೊತೆಯಾಗಿ ನಿಲ್ಲುವ ಮನಸ್ಸು ಇನ್ನೂ ದೊಡ್ಡದು.

"ರಾಖಿಯ ದಾರ ಚಿಕ್ಕದಾಗಿರಬಹುದು, ಆದರೆ ಅದು ಕಟ್ಟುವ ಪ್ರೀತಿ ಮತ್ತು ವಿಶ್ವಾಸದ ಬಂಧ ಅನಂತ."

ರಕ್ಷಾ ಬಂಧನವು ಕೇವಲ ಒಂದು ಹಬ್ಬವಲ್ಲಸಂಬಂಧಗಳನ್ನು ಉಳಿಸುವ, ಮಾನವೀಯತೆಯನ್ನು ಬೆಳೆಸುವ ಮತ್ತು ಪರಸ್ಪರ ರಕ್ಷಣೆಯ ಸಂಕಲ್ಪವನ್ನು ನೆನಪಿಸುವ ಭಾರತೀಯ ಸಂಸ್ಕೃತಿಯ ಪವಿತ್ರ ಸಂದೇಶವಾಗಿದೆ.

ಲೇಖನ
– ಸಂತೋಷ ಬಗಲಿ,
ಸಾಮಾಜಿಕ ಚಿಂತಕರು & ಹವ್ಯಾಸಿ ಬರಹಗಾರರು
ವಿಜಯಪುರ



# ಸರ್ಕಾರದಿಂದ ರೈತರ ಗಾಯದ ಮೇಲೆ ಬರೆ

■ ಉದಯರಶ್ಮಿ ದಿನಪತ್ರಿಕೆ



**ಬರಗಾಲ ಪಟ್ಟಿಯಿಂದ ಸಿಂದಗಿ ಆಲಮೇಲ ಕೈಬಿಟ್ಟದ್ದಕ್ಕೆ ಮಾಜಿ ಶಾಸಕ ರಮೇಶ ಭೂಸನೂರ ತೀವ್ರ ಆಕ್ರೋಶ**

ಸಿಂದಗಿ: ಬರಗಾಲ ಪಟ್ಟಿಯಿಂದ ಸಿಂದಗಿ ಹಾಗೂ ಆಲಮೇಲ ಅವಳಿ ತಾಲೂಕುಗಳನ್ನು ಕೈಬಿಟ್ಟಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ಮಾಜಿ ಶಾಸಕ ರಮೇಶ ಭೂಸನೂರ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಭೀಕರ ಬರಗಾಲದಿಂದ ರೈತರ ಮೊಗದ ಹರ್ಷ ಕಸಿದುಕೊಂಡಿದೆ. ಇಂತಹ ಸಂದರ್ಭದಲ್ಲಿ ಬರಗಾಲ ಪಟ್ಟಿಯಿಂದ ಅವಳಿ ತಾಲೂಕುಗಳನ್ನು ಕೈಬಿಟ್ಟಿರುವುದು ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಸರ್ಕಾರದ ಈ ಮಲತಾಯಿ ಧೋರಣೆ ಸರಿಯಲ್ಲ ಎಂದು ಕಿಡಿಕಾರಿದರು. ಸರ್ಕಾರ ಕೇವಲ ಕಚೇರಿ ವರದಿಗಳಿಗೆ ಸೀಮಿತವಾಗದೆ, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ವಾಸ್ತವ ಪರಿಸ್ಥಿತಿಯನ್ನು ಅರಿತುಕೊಳ್ಳಬೇಕು. ಸಿಂದಗಿ, ಆಲಮೇಲ ತಾಲೂಕುಗಳ ರೈತರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗಲು ನಾವು ಬಿಡುವುದಿಲ್ಲ ಎಂದು ಎಚ್ಚರಿಸಿದರು. ಕೂಡಲೇ ಸಿಂದಗಿ ಹಾಗೂ ಆಲಮೇಲ ತಾಲೂಕುಗಳನ್ನು ಬರಗಾಲ ಪೀಡಿತ ತಾಲೂಕುಗಳೆಂದು ಘೋಷಿಸಿ, ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕು. ಇಲ್ಲವಾದಲ್ಲಿ ಸರ್ಕಾರದ ವಿರುದ್ಧ ತೀವ್ರ ಪ್ರತಿಭಟನೆ ನಡೆಸಲಾಗುವುದು. ರೈತರ ಹಿತಕ್ಕಾಗಿ ಉಗ್ರ ಹೋರಾಟ ಕೈಗೊಳ್ಳುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಕೆ ನೀಡಿದರು.

## ನ್ಯಾಯಬೆಲೆ ಅಂಗಡಿಗಳ ಮೇಲೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳ ದಿಢೀರ್ ದಾಳಿ

# ಪಡಿತರ ಅಕ್ಕಿಯ ತೂಕದಲ್ಲಿ ವಂಚನೆ ಆರೋಪ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ವಿಜಯಕುಮಾರ್ ಪಾಟೀಲ ಅವರ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಸಿಂದಗಿ ಪಟ್ಟಣದ ಎಪಿಎಂಸಿ ಯಾರ್ಡ್ನಲ್ಲಿರುವ ನ್ಯಾಯಬೆಲೆ ಅಂಗಡಿ ಸಂಖ್ಯೆ 158, ಸೋಂಪುರ ರಸ್ತೆ ಹಾಗೂ ನ್ಯಾಯಬೆಲೆ ಅಂಗಡಿ ಸಂಖ್ಯೆ 156ಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಅಧಿಕಾರಿಗಳ ದಿಢೀರ್ ಪರಿಶೀಲನೆ ವೇಳೆ ನ್ಯಾಯಬೆಲೆ ಅಂಗಡಿಗಳಲ್ಲಿ ಗ್ರಾಹಕರಿಗೆ ವಿತರಿಸಲಾಗುವ ಪಡಿತರ ಅಕ್ಕಿಯ ತೂಕದ ಕುರಿತು ಗಂಭೀರ ಆರೋಪಗಳು ಕೇಳಿಬಂದಿವೆ. ಕೆಲವು ಗ್ರಾಹಕರಿಗೆ ನಿಗದಿತ ಪ್ರಮಾಣಕ್ಕಿಂತ 4ರಿಂದ 5 ಕೆ.ಜಿ.ವರೆಗೆ ಕಡಿಮೆ ತೂಕದಲ್ಲಿ ಅಕ್ಕಿ ನೀಡಲಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಅಧಿಕಾರಿಗಳು ಸ್ಥಳದಲ್ಲೇ ತೂಕದ ಪ್ರಮಾಣವನ್ನು ಪರಿಶೀಲಿಸಿ ಪಡಿತರ ಪಡೆಯಲು ಬಂದಿದ್ದ ಗ್ರಾಹಕರಿಂದಲೂ ಅಧಿಕಾರಿಗಳು ಮಾಹಿತಿ ಪಡೆದುಕೊಂಡರು.

ಅಂಗಡಿಯಲ್ಲಿದ್ದ ಅಕ್ಕಿಯ ದಾಸ್ತಾನು, ವಿತರಣಾ ಪ್ರಮಾಣ, ದಾಖಲೆಗಳು ಹಾಗೂ ತೂಕದ ಸಾಧನಗಳನ್ನು ಪರಿಶೀಲಿಸಿ, ವಿತರಣೆ ಪ್ರಕ್ರಿಯೆಯಲ್ಲಿ ಯಾವುದೇ ಅಕ್ರಮ ನಡೆಯುತ್ತಿದೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸಿದರು.

ಗ್ರಾಹಕರಿಗೆ ವಿತರಿಸಬೇಕಾದ ಪಡಿತರದಲ್ಲಿ ಯಾವುದೇ ರೀತಿಯ ಕಡಿತ ಅಥವಾ ತೂಕ ವಂಚನೆ ಮಾಡುವುದು ನಿಯಮಬಾಹಿರ. ಸರ್ಕಾರ ನಿಗದಿಪಡಿಸಿರುವ ಪ್ರಮಾಣದಂತೆ ಅರ್ಹ ಫಲಾನುಭವಿಗಳಿಗೆ ಪಡಿತರ ವಿತರಿಸಬೇಕು ಎಂದು ಅಧಿಕಾರಿಗಳು ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ, ತೂಕದಲ್ಲಿ ವಂಚನೆ ಮಾಡುತ್ತಿರುವುದು ಅಥವಾ ದಾಖಲೆಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಂತಹ ಅಂಗಡಿ ಮಾಲೀಕರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದರು.

ನ್ಯಾಯಬೆಲೆ ಅಂಗಡಿಗಳ ಮೂಲಕ ಬಡ ಕುಟುಂಬಗಳಿಗೆ ತಲುಪಬೇಕಾದ ಪಡಿತರ ಅಕ್ಕಿ ಮಧ್ಯವರ್ತಿಗಳ ಪಾಲಾಗದಂತೆ ಹಾಗೂ ಫಲಾನುಭವಿಗಳಿಗೆ ನಿಗದಿತ ಪ್ರಮಾಣದಲ್ಲಿ ಅಕ್ಕಿ ತಲುಪುವಂತೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ ಎಂಬ ಆಗ್ರಹವೂ ಸಾರ್ವಜನಿಕರಿಂದ ಕೇಳಿಬಂದಿದೆ. ಗ್ರಾಹಕರಿಗೆ ವಿತರಿಸುವ ಪಡಿತರದ ಪ್ರಮಾಣದಲ್ಲಿ ಯಾವುದೇ ರೀತಿಯ ವಂಚನೆ ಕಂಡುಬಂದರೂ ಅದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ನಿಯಮ ಉಲ್ಲಂಘಿಸುವ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# ಮಾನವೀಯತೆ ಮೆರೆದ ಪೊಲೀಸ್ ಸಿಬ್ಬಂದಿ

■ ಉದಯರಶ್ಮಿ ದಿನಪತ್ರಿಕೆ




ದೇವರಹಿಪ್ಪರಗಿ: ರಾಷ್ಟ್ರೀಯ ಹೆದ್ದಾರಿಯಲ್ಲಿ ಅನಾಥವಾಗಿ ಅಲೆಯುತ್ತಿದ್ದ ಮಹಿಳೆಯನ್ನು ಪೊಲೀಸ್ ಸಿಬ್ಬಂದಿ, ಐಸಿಡಿಎಸ್ ಪೋಷಣ ಸಂಯೋಜಕ ಸೇರಿ ನಿರ್ಗತಿಕ ಕೇಂದ್ರಕ್ಕೆ ಸೇರಿಸುವ ಮೂಲಕ ಮಾನವೀಯತೆ ಮೆರೆದರು.

ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಸಿಂದಗಿಯಿಂದ ವಿಜಯಪುರಕ್ಕೆ ತೆರಳುವ ಮಾರ್ಗಮಧ್ಯದ ಪಡಗಾನೂರ ಕ್ರಾಸ್ ಹತ್ತಿರ ನಿರ್ಗತಿಕ ಮಹಿಳೆಯೊಬ್ಬರನ್ನು ಏಕಾಂಗಿಯಾಗಿ ಅಲೆಯುತ್ತಿರುವುದನ್ನು ಕಂಡು ಸಿಂದಗಿ ತಾಲ್ಲೂಕು ಐಸಿಡಿಎಸ್ ಪೋಷಣ ಸಂಯೋಜಕ ಪ್ರಮೋದ ಬೆಳಗಾವಿ ಮಹಿಳೆಯ ಪರಿಸ್ಥಿತಿ ಅವಲೋಕಿಸಿ, ತಕ್ಷಣ ಕಾರ್ಯಪ್ರವೃತ್ತರಾಗಿ 112 ಗೆ ಕರೆ ಮಾಡಿ ಪೊಲೀಸ್ ಸಿಬ್ಬಂದಿಯ ಸಹಕಾರದೊಂದಿಗೆ ಮಹಿಳೆಯನ್ನು ರಕ್ಷಣೆ ಮಾಡಿದರು. ನಂತರ ನಿರ್ಗತಿಕರ ಕೇಂದ್ರದ ಸಿಬ್ಬಂದಿಗೆ ಸಂಪರ್ಕಿಸಿ ಸುರಕ್ಷಿತವಾಗಿ ಕೇಂದ್ರಕ್ಕೆ ಕಳಿಸಿದರು.

ಪೊಲೀಸ್ ಸಿಬ್ಬಂದಿ ಪ್ರಕಾಶ ಭುಯ್ಯಾರ, ಜಹಾಂಗೀರ ಅವುಟಿ, ಮಳಸಿದ್ಧ ಬೋರಗಿ, ಪಾಷಾ ಜಮಾದಾರ, ಜಕ್ಕಪ್ಪ ಉಪ್ಪಲದಿನ್ನಿ, ಸುನೀಲ ನಾಯ್ಕೋಡಿ ಇದ್ದರು.

# ‘ಅಮೃತ ಹಸ್ತದ ಮಣ್ಣಿನ ಗಣೇಶ’ ಕಾರ್ಯಕ್ರಮಕ್ಕೆ ಚಾಲನೆ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಕಲಾವಿದರ ಅಮೃತ ಹಸ್ತದಿಂದ ತಯಾರಿಸಲ್ಪಡುವ ಗಣಪತಿ ಮೂರ್ತಿಗಳು ಬಸವ ಹಸಿರು ಬಳಗದ ಭಕ್ತಿ, ಕಲೆಯ ಸಂಕೇತವಾಗಿವೆ ಎಂದು ಹೂವಿನಹಿಪ್ಪರಗಿ ಚಿತ್ರಕಲಾ ಶಾಲೆಯ ಪ್ರಾಚಾರ್ಯ ರಮೇಶ ಸಾಸನೂರ ಹೇಳಿದರು.

ತಾಲ್ಲೂಕಿನ ಯಾಳವಾರ ಗ್ರಾಮದಲ್ಲಿ ಬುಧವಾರ ಜರುಗಿದ ದೃಶ್ಯಬಿಂಬ ಕಲಾ ಪ್ರತಿಷ್ಠಾನ ವಿಜಯಪುರ ಹಾಗೂ ಬಸವ ಹಸಿರು ಬಳಗ ಸಹಯೋಗದ ‘ಅಮೃತ ಹಸ್ತದ ಮಣ್ಣಿನ ಗಣೇಶ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಣ್ಣಿನ ಗಣಪ ನೀರಲ್ಲಿ ಸುಲಭವಾಗಿ ಕರಗಿ ಹೋಗುತ್ತವೆ ಇದಕ್ಕಾಗಿ ವಿವಿಧ ಜಿಲ್ಲೆಗಳಿಂದ ಕಲಾಕಾರರು ಬಂದಿದ್ದಾರೆ. ನೆಲ, ಜಲ ರಕ್ಷಣೆ ನಮ್ಮ ಜವಾಬ್ದಾರಿಯಾಗಿದೆ ಜೊತೆಗೆ ಮಣ್ಣಿನ ಗಣೇಶನ ಮೂರ್ತಿಗಳು ಪರಿಸರ ರಕ್ಷಣೆಗೂ ಮಹತ್ವದ ಕೊಡುಗೆಗಳಾಗಿವೆ ಎಂದರು

ಬಸವ ಹಸಿರು ಬಳಗದ ಗೌರವಾಧ್ಯಕ್ಷ ಎಸ್.ಎಸ್. ಗಡೇದ, ಅಧ್ಯಕ್ಷತೆ ವಹಿಸಿ ಮಾತನಾಡಿ, ಪಿಓಪಿ ಗಣಪನ ಮೂರ್ತಿ ನೀರಲ್ಲಿ ಕರಗದು, ಅದಕ್ಕೆ ಹಾಕಲಾದ ವಿವಿಧ ರಾಸಾಯನಿಕ ಬಣ್ಣಗಳಿಂದ ಸೀಸ, ಪಾದರಸದಂತಹ ಅಪಾಯಕಾರಿ ವಸ್ತುಗಳು ನೀರಿನಲ್ಲಿ ಸೇರಿ, ನೀರು ಸೇವನೆ ಮಾಡುವ ಮನುಷ್ಯನಿಗೂ ಅದರಲ್ಲಿ ವಾಸ ಮಾಡುವ ಜಲಚರಗಳಿಗೂ ಅಪಾಯ ತರುತ್ತದೆ. ಆದ್ದರಿಂದ ಮಣ್ಣಿನ ಗಣಪತಿ ಮೂರ್ತಿಗಳನ್ನು ನಿರ್ಮಿಸಿ ಮತಕ್ಷೇತ್ರ ವ್ಯಾಪ್ತಿಯ 120 ಗ್ರಾಮಗಳಿಗೆ ಉಚಿತವಾಗಿ ನೀಡುವ ಮೂಲಕ ಬಸವ ಹಸಿರು ಬಳಗದ ಅಧ್ಯಕ್ಷ ಭೀಮನಗೌಡ ಗುಂಡಕನಾಳ, ಸತೀಶ ಕೇಮಶೆಟ್ಟಿ ಅವರ ತಂಡ ಪರಿಸರ ರಕ್ಷಣೆಯಲ್ಲಿ ಬಹುಮೂಲ್ಯ ಕೆಲಸ ಮಾಡುತ್ತಿದೆ. ಇವರ ಕಾರ್ಯ ಶ್ಲಾಘನೀಯ ಎಂದರು.

ಉತ್ನಾಳ ಹಿರೇಮಠದ ಸಂಗಮೇಶ್ವರ ಸ್ವಾಮೀಜಿ, ಸ್ಥಳೀಯ ಪಂಚವಟಿ ಆಶ್ರಮದ ಕಾಶೀನಾಥ ಸ್ವಾಮೀಜಿ, ಪುರಾಣಿಕ ಬಸಯ್ಯ ಶಾಸ್ತ್ರಿ ಹಿರೇಮಠ ಸಾನಿಧ್ಯ ವಹಿಸಿ ಮಾತನಾಡಿದರು.

ಗ್ರಾಮ ಪಂಚಾಯಿತಿ ಪಿಡಿಓ ಎಮ್.ಎಸ್.ಕತ್ತಿ, ಎಸ್.ಎಮ್.ದೊಡಮನಿ, ಎಸ್.ಎಸ್.ಭಂಟನೂರ ಹಾಗೂ ಕಲಾವಿದರು ಇದ್ದರು.



# ವಿಪ್ರ ಸಮುದಾಯದಿಂದ ಯಜ್ಞೋಪವೀತ ಧಾರಣೆ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಯಜ್ಞೋಪವೀತ ಧಾರಣೆ ವಿಪ್ರ ಧಾರ್ಮಿಕ ಪರಂಪರೆಯಲ್ಲಿ ಮಹತ್ವದ್ದಾಗಿದೆ ಎಂದು ಶ್ರೀಚಿದಂಬರ ಸೇವಾ ಸಮಿತಿ ಅಧ್ಯಕ್ಷ ನರೇಂದ್ರ ನಾಡಗೌಡ ಹೇಳಿದರು.

ಪಟ್ಟಣದ ವಿಠ್ಠಲಮಂದಿರದಲ್ಲಿ ಗುರುವಾರ ವಿಪ್ರ ಸಮುದಾಯದಿಂದ ಜರುಗಿದ ಯಜ್ಞೋಪವೀತ ಧಾರಣೆಯ ಕಾರ್ಯದಲ್ಲಿ ಪಾಲ್ಗೊಂಡು ಮಾತನಾಡಿದರು.

ವಿಪ್ರರು ಯಜ್ಞೋಪವೀತವನ್ನು ಸಾಮಾನ್ಯವಾಗಿ ಜನಿವಾರ ಅಥವಾ ಪವಿತ್ರದಾರ ಎಂದು ಕರೆಯುತ್ತಾರೆ. ಜನಿವಾರ ದೇವಋಣ, ಋಷಿಋಣ ಮತ್ತು ಪಿತೃಋಣಗಳನ್ನು ನೆನಪಿಸುವ ಸಂಕೇತವಾಗಿದೆ ಎಂದರು. ನೇತೃತ್ವ ವಹಿಸಿದ ಅಶೋಕ ಭಟ್ ಮಾತನಾಡಿ, ಜನಿವಾರ ವ್ಯಕ್ತಿಗೆ ಸತ್ಯ, ಶಿಸ್ತು, ಸದಾಚಾರ ಮತ್ತು ಕರ್ತವ್ಯನಿಷ್ಠೆಯನ್ನು ಪಾಲಿಸುವ ಜವಾಬ್ದಾರಿಯನ್ನು ನೆನಪಿಸುತ್ತದೆ. ಯಜ್ಞೋಪವೀತವು ಕೇವಲ ಒಂದು ದಾರವಲ್ಲ; ಆಧ್ಯಾತ್ಮಿಕ ಜ್ಞಾನ, ಕರ್ತವ್ಯ ಮತ್ತು ಶಿಸ್ತಿನ ಸಂಕೇತವಾಗಿದೆ ಎಂದರು.

ಶ್ರೀಪಾದಭಟ್ ಜೋಶಿ ನೇತೃತ್ವದಲ್ಲಿ ವಿಪ್ರರು ಯಜ್ಞೋಪವೀತ ಧಾರಣೆ ಮಾಡಿದರು. ನಂತರ ವೇದಾಧ್ಯಯನ, ಗಾಯತ್ರಿಮಂತ್ರ ಜಪ ಮುಂತಾದ ಧಾರ್ಮಿಕ ಆಚರಣೆಗಳು ನಡೆದವು.

ವೆಂಕಟೇಶ ಕುಲಕರ್ಣಿ, ಚಿದಂಬರ ಕುಲಕರ್ಣಿ, ಪ್ರಮೋದ ನಾಡಗೌಡ, ಕೃಷ್ಣಾಜೀ ಕುಲಕರ್ಣಿ, ಶರತ ಕುಲಕರ್ಣಿ, ಶ್ರೀಧರ ನಾಡಗೌಡ, ಆನಂದ ಕುಲಕರ್ಣಿ, ಅಶೋಕ ಕುಲಕರ್ಣಿ, ಶ್ರೀನಿವಾಸ ಕುಲಕರ್ಣಿ ಸಮರ್ಥ ಜೋಶಿ ಇದ್ದರು.

# ಧರಣಿ ಕೊನೆಗೊಳಿಸಲು ತಾಪಂ ಇಓ ಭಾರತಿ ಚೆಲುವಯ್ಯ ಮನವಿ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಕರ್ನಾಟಕ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ವಿಜಯಪುರ ಜಿಲ್ಲಾ ಹಾಗೂ ದೇವರಹಿಪ್ಪರಗಿ ತಾಲ್ಲೂಕು ಆಡಳಿತದ ವೈಫಲ್ಯ ಖಂಡಿಸಿ ಹಾಗೂ ನ್ಯಾಯಯುತ ಬೇಡಿಕೆಗಳನ್ನು ಇಡೇರಿಸುವಂತೆ ಆಗ್ರಹಿಸಿ ನಡೆದ 8ನೇ ದಿನದ ಧರಣಿ ಸತ್ಯಾಗ್ರಹ ಸ್ಥಳಕ್ಕೆ ತಾಲ್ಲೂಕು ಪಂಚಾಯಿತಿ ಇಓ ಭಾರತಿ ಚೆಲುವಯ್ಯ ಭೇಟಿ ನೀಡಿ ಧರಣಿ ಕೊನೆಗೊಳಿಸಲು ಮನವಿ ಮಾಡಿದರು.

ಪಟ್ಟಣದ ಅಂಬೇಡ್ಕರ್ ವೃತ್ತದ ಧರಣಿ ಸ್ಥಳಕ್ಕೆ ಗುರುವಾರ ತಾಲ್ಲೂಕು ಪಂಚಾಯಿತಿ ಇಓ ಭಾರತಿ ಚೆಲುವಯ್ಯ, ಎಡಿ ಶಿವಾನಂದ ಮೂಲಿಮನಿ, ಪಿಡಿಓ ಕಾಶೀನಾಥ ಕಡಕಭಾವಿ, ಸಹಾಯಕ ಯೋಜನಾ ನಿರ್ದೇಶಕ ಶ್ರೀನಿವಾಸ ಪವಾರ, ವಿಷಯ ನಿರ್ವಾಹಕ ಜಿ.ರೋಡಗಿ ಆಗಮಿಸಿ ಧರಣಿ ಕೈಬಿಡಲು ವಿನಂತಿಸಿದರು.

ಈ ಸಂದರ್ಭದಲ್ಲಿ ಡಿಎಸ್ಎಸ್ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ನಮ್ಮ ಬೇಡಿಕೆಗಳು ಇಡೇರುವವರೆಗೆ ಹೋರಾಟ ನಿರಂತರ ಎಂದು ಹೇಳಿದರು. ಜಿಲ್ಲಾ ಸಂಘಟನಾ ಸಂಚಾಲಕ ಪ್ರಕಾಶ ಗುಡಿಮನಿ, ತಾಲ್ಲೂಕು ಸಂಚಾಲಕ ರಾಜಕುಮಾರ ಸಿಂದಗೇರಿ, ಸಂಘಟನಾ ಸಂಚಾಲಕ ಬಸವರಾಜ ಇಂಗಳಗಿ, ಶ್ರೀಕಾಂತ ಬಜಂತ್ರಿ, ಆಕಾಶ ಕೊಂಬಿನ, ಪ್ರಶಾಂತ ದೊಡಮನಿ, ರಮೇಶ ಬನ್ನೊಡೆ, ಯಮನಪ್ಪ ಭೂತಾಳಿ, ದಯಾನಂದ ರಾಠೋಡ, ರಾಜು ಚವ್ಹಾಣ, ಮಹೇಶ ಖಾದ್ರಿ, ನಾಗರಾಜ ಬಳ್ಳಾರಿ, ಸಂತೋಷ ಗುಡಿಮನಿ, ಕಾಶೀನಾಥ ಮುಳಸಾವಳಗಿ, ಸುನೀಲ ದೊಡಮನಿ ಇದ್ದರು.

# ಕ್ಯಾನ್ಸರ್ ರೋಗದಿಂದ ಜಾಗೃತರಾಗಿರಬೇಕು :ಡಿಎಚ್ ಡಾ.ಮಲ್ಲನಗೌಡ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಬಾಯಿ, ಸ್ತನ ಹಾಗೂ ಗರ್ಭಕಂಠ ಕ್ಯಾನ್ಸರ್‌ಗಳ ಕುರಿತು ಪ್ರತಿಯೊಬ್ಬರೂ ಜಾಗೃತರಾಗಿರಬೇಕು. ಇತ್ತೀಚಿನ ದಿನಗಳಲ್ಲಿ ಬದಲಾದ ಜೀವನಶೈಲಿ, ಅನಾರೋಗ್ಯಕರ ಆಹಾರ ಪದ್ಧತಿ, ಪರಿಸರ ಅಂಶಗಳು ಕ್ಯಾನ್ಸರ್ ಪ್ರಕರಣಗಳು ಹೆಚ್ಚಳಕ್ಕೆ ಕಾರಣ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಮಲ್ಲನಗೌಡ ಬಿರಾದಾರ ಅವರು ಹೇಳಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ ಆರೋಗ್ಯ ಸೌಧ ಸಭಾ ಭವನದಲ್ಲಿ ಗುರುವಾರ ಸಿಂದಗಿ ತಾಲೂಕಿನ ಆಶಾ ಕಾರ್ಯಕರ್ತೆಯರಿಗಾಗಿ ಆಯೋಜಿಸಲಾಗಿದ್ದ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಿಯಮಿತ ವ್ಯಾಯಾಮ, ಆರೋಗ್ಯಕರ ಆಹಾರ, ತಂಬಾಕು ಹಾಗೂ ಮದ್ಯಪಾನ ತ್ಯಜಿಸುವುದರ ಜೊತೆಗೆ ಆರಂಭಿಕ ಹಂತದಲ್ಲೇ ರೋಗ ಪತ್ತೆ ಹಚ್ಚುವುದರಿಂದ ಕ್ಯಾನ್ಸರ್ ಅಪಾಯದಿಂದ ಪಾರಾಗಬಹುದು ಎಂದು ಸಲಹೆ ನೀಡಿದರು. ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಪ್ರಾದೇಶಿಕ ವ್ಯವಸ್ಥಾಪಕ ಡಾ. ಗುರುರಾಜ ಕುಲಕರ್ಣಿ ಮಾತನಾಡಿ, ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ಬರಲು ಕಾರಣಗಳು ಹಾಗೂ ಅವುಗಳ ತಪಾಸಣಾ ವಿಧಾನಗಳ ಕುರಿತು ವಿವರಣೆ ನೀಡಿ, ಆಶಾ ಕಾರ್ಯಕರ್ತೆಯರಿಗೆ ಕ್ಯಾನ್ಸರ್ ಜಾಗೃತಿ ಕೈಪಿಡಿ ವಿತರಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಅಪ್ಪಾಸಾಹೇಬ ಇನಾಮದಾರ ಮಾತನಾಡಿ, ಗೃಹ ಆರೋಗ್ಯ ಕಾರ್ಯಕ್ರಮದಡಿ ಮನೆ ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಸಾರ್ವಜನಿಕರಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವಂತೆ ಆಶಾ ಕಾರ್ಯಕರ್ತೆಯರಿಗೆ ಸೂಚಿಸಿದರು. ಈ ಸಮಾರಂಭದಲ್ಲಿ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಿಇಒ ಡಾ. ಗುರು ಸುಹಾಸ್, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ರಾಜೇಶ್ವರಿ ಗೊಲಗೇರಿ, ಜಿಲ್ಲಾ ಎನ್‌ಸಿಡಿ ಕಾರ್ಯಕ್ರಮ ಸಂಯೋಜಕಿ ಡಾ. ಪ್ರಿಯದರ್ಶನಿ ಪಾಟೀಲ, ಸಿಂದಗಿ ತಾಲೂಕು ಆರೋಗ್ಯ ಅಧಿಕಾರಿ ಡಾ. ಎ. ಎ. ಮಾಗಿ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ. ಕೋಲೂರ, ಆಶಾ ಮೆಂಟರ್ ಮಲ್ಲಮ್ಮ, ತಾಲೂಕು ಶಿಕ್ಷಣಾಧಿಕಾರಿ ರೇಖಾ ದಶವಂತ ಸೇರಿದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಸಿಂದಗಿ ತಾಲೂಕಿನ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

# ಯಂಗ್ ಪ್ರಫೋಶನಲ್ ಹುದ್ದೆಗೆ ನೇರ ಸಂದರ್ಶನಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದಲ್ಲಿ ನಿರ್ವಹಣೆಯಲ್ಲಿರುವ ಅಖಿಲ ಭಾರತ ಸಮನ್ವಿತ ಒಣ ಬೇಸಾಯ ಸಂಶೋಧನಾ ಯೋಜನೆಯಡಿ ಆನ್ ಫಾರ್ಮ್ ರಿಸರ್ಚ್ ಪ್ರೋಗ್ರಾಂ ಯೋಜನೆಯಲ್ಲಿ ಖಾಲಿ ಇರುವ ಯಂಗ್ ಪ್ರಫೊಶನಲ್ –1 ತಾತ್ಕಾಲಿಕ ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.ಆಯ್ಕೆಯಾಗುವ ಅಭ್ಯರ್ಥಿಗಳಿಗೆ ತಾತ್ಕಾಲಿಕವಾಗಿ ಹುದ್ದೆ ನೀಡಲಾಗುತ್ತದೆ. ಹಿಟ್ನಳ್ಳಿಯ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕರ ಕಚೇರಿಯಲ್ಲಿ ಸೆ. 9 ರಂದು ಬೆಳಿಗ್ಗೆ 10.30 ಕ್ಕೆಸಂದರ್ಶನ ನಡೆಯಲಿದೆ. ಹುದ್ದೆಗೆ ಅಗತ್ಯವಿರುವ ಶೈಕ್ಷಣಿಕ ವಿದ್ಯಾರ್ಹತೆ, ಮಾಸಿಕ ವೇತನ ಮತ್ತು ಇತರೆ ನಿಯಮಾವಳಿಗಳ ಮಾಹಿತಿಗಾಗಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ https://sites.google.com/ a/uasd.in/news/temporary-appointment-notification-circulars ಗೆ ಭೇಟಿ ನೀಡಬಹುದು.

ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ತಮ್ಮ ಅಗತ್ಯ ದಾಖಲೆಗಳೊಂದಿಗೆ ನಿಗದಿತ ಸಮಯಕ್ಕೆ ಸಂದರ್ಶನಕ್ಕೆ ಹಾಜರಾಗಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ತಾಂತ್ರಿಕ ಅಧಿಕಾರಿ ಹುದ್ದೆಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದಲ್ಲಿ ನಿರ್ವಹಣೆಯಲ್ಲಿರುವ ಅಖಿಲ ಭಾರತ ಸಮನ್ವಯ ಕೃಷಿ ಹವಾಮಾನಶಾಸ್ತ್ರ ಯೋಜನೆಯ ಗ್ರಾಮೀಣ ಕೃಷಿ ಮೌಸಮ್ ಸೇವಾ (ಉಏಒಖ) ಯೋಜನೆಯಡಿ ಖಾಲಿ ಇರುವ ತಾಂತ್ರಿಕ ಅಧಿಕಾರಿ ತಾತ್ಕಾಲಿಕ ಹುದ್ದೆಯ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹಿಟ್ನಳ್ಳಿ ಕೃಷಿ ಸಂಶೋಧನಾ ಕೇಂದ್ರದ ಪ್ರಾದೇಶಿಕ ನಿರ್ದೇಶಕರ ಸಹ ಸಂಶೋಧನಾ ನಿರ್ದೇಶಕರ ಕಚೇರಿಯಲ್ಲಿ ಸೆ. 9 ರಂದು ಬೆಳಿಗ್ಗೆ 10:30 ಗಂಟೆಗೆ ನೇರ ಸಂದರ್ಶನ ನಡೆಯಲಿದೆ.

ಹುದ್ದೆಗೆ ಅಗತ್ಯವಿರುವ ಶೈಕ್ಷಣಿಕ ವಿದ್ಯಾರ್ಹತೆ, ಮಾಸಿಕ ವೇತನ ಶ್ರೇಣಿ ಹಾಗೂ ಇತರೆ ನಿಬಂಧನೆಗಳ ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ https:// sites.google.com/a/uasd.in/ news/tem porary-appointment-notification-circular ಗೆ ಭೇಟಿ ನೀಡಬಹುದು. ನೇರ ಸಂದರ್ಶನಕ್ಕೆ ಹಾಜರಾಗಲು ಬಯಸುವ ಅಭ್ಯರ್ಥಿಗಳು ತಮ್ಮ ಅಗತ್ಯ ಮೂಲ ದಾಖಲೆಗಳು ಹಾಗೂ ಅರ್ಜಿಗಳೊಂದಿಗೆ ನಿಗದಿತ ಸಮಯಕ್ಕೆ ಹಿಟ್ನಳ್ಳಿ ಫಾರ್ಮ್ ಕಚೇರಿಯಲ್ಲಿ ಇರಬೇಕು. ಹೆಚ್ಚಿನ ವಿವರಗಳಿಗಾಗಿ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ ಕಚೇರಿಯನ್ನು ನೇರವಾಗಿ ಸಂಪರ್ಕಿಸಬಹುದು ಎಂದು ಪ್ರಾದೇಶಿಕ ಸಂಶೋಧನಾ ಕೇಂದ್ರದ ಕೃಷಿ ಹವಾಮಾನಶಾಸ್ತ್ರದ ಮುಖ್ಯಸ್ಥರ ಪ್ರಕಟಣೆ ತಿಳಿಸಿದೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR